ಮಾರ್ಚ್ 2024 ಸಂಪುಟ 6 ಸಂಚಿಕೆ 3 ಸೆಲ್ಕೋ ಮಾಸಪತ್ರಿಕೆ

SELCO

# Sunಚಲನ

# ಮಹಿಳಾ ದಿನದ ಮಾತುಗಳು
# ಉಳಿದ ದಿನಗಳ ಮೌನ



ಅಂಕೋಲೆಯ ಗೋಖಲೆ ಸೆಂಟಿನರಿ ಕಾಲೇಜಿನಲ್ಲಿ ಸೆಲ್ಕೋ ಸಂಸ್ಥೆ ಮತ್ತು ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಅಳವಡಿಸಲಾದ ಸೌರಶಕ್ತಿ ಆಧಾರಿತ ಇನ್ವ ವ್ಯವಸ್ಥೆಯ ಉದ್ಘಾಟನ ಕಾರ್ಯಕ್ರಮ ನೆರವೇರಿತು.

ಸೆಲ್ಕೋ ಸಂಸ್ಥೆಯ ಸಿಇಓ ಮೋಹನ್ ಭಾಸ್ಕರ್ ಹೆಗಡೆ ಅವರು ಉದ್ಘಾಟಿಸಿದರು. ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಾದ ಖ್ಯಾತ ಉದ್ಯಮಿ ಮಂಗಲ್‌ದಾಸ್ ಕಾಮತ್, ಪಿಯು ಕಾಲೇಜಿನ ಪ್ರಾಂಶುಪಾಲ ಸುಜಾತಾ ಲಾಡ್ ಅವರು, ಕಾಲೇಜಿನ ಟ್ರಸ್ಟಿಗಳಲ್ಲೊಬ್ಬರಾದ ವಿ. ಎನ್. ನಾಯಕ್, ಸೆಂಟಿನರಿ ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ವಿ. ವಸ್ತ್ರದ್ ಅವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸೆಲ್ಕೋ ಸಂಸ್ಥೆಯ ಸಿಇಓ ಮೋಹನ್ ಭಾಸ್ಕರ್ ಹೆಗಡೆ ಅವರನ್ನು ಕಾಲೇಜು ಹಾಗೂ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಗಣ್ಯರ ಉಪಸ್ಥಿತಿಯಲ್ಲಿ ಸನ್ಮಾನಿಸಲಾಯಿತು.





ಬೆಂಗಳೂರಿನ ಗಾಂಧಿ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ರೈತ ಸೌರಶಕ್ತಿ ಮೇಳದಲ್ಲಿದ್ದ ಸೆಲ್ಕೋ ಸಂಸ್ಥೆಯ ಮಳಿಗೆಗೆ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೇಟಿ ನೀಡಿ ಸೌರಶಕ್ತಿಚಾಲಿತ ವ್ಯವಸ್ಥೆಗಳ ಕುರಿತು ವಿವರಗಳನ್ನು ಪಡೆದರು. ಸೆಲ್ಕೋ ಇಂಡಿಯಾದ ಯೋಜನೆಗಳ ವಿಭಾಗದ ಮುಖ್ಯ ವ್ಯವಸ್ಥಾಪಕ ಪಾರ್ಥಸಾರಥಿ ಅವರು ಗಣ್ಯರಿಗೆ ವಿವರಗಳನ್ನು ನೀಡಿದರು. ಈ ಸಂದರ್ಭದಲ್ಲಿ, ಇಂಧನ ಸಚಿವ ಕೆ. ಜೆ. ಜಾರ್ಜ್, ಕರ್ನಾಟಕ ರಾಜ್ಯ ನವೀಕರಿಸಬಹುದಾದ ಇಂಧನ ಅಭಿವೃದ್ಧಿ (ಕೆಆರ್‌ಡಿಇಎಲ್)ಯ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಮುಂತಾದವರು ಉಪಸ್ಥಿತರಿದ್ದರು.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಪೂರಿಗಾಲಿ ಗ್ರಾಮದಲ್ಲಿ ಸೌರಶಕ್ತಿಚಾಲಿತ ಸ್ಮಾರ್ಟ್ ಕ್ಲಾಸ್ ಅನ್ನು ಮಳವಳ್ಳಿ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕ ಪಿ. ಎಂ. ನರೇಂದ್ರಸ್ವಾಮಿ ಅವರು ಉದ್ಘಾಟಿಸಿದರು,
ಈ ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರ ಪಾಟೀಲ್, ಎಸ್‌ಡಿಎಂಸಿ ಅಧ್ಯಕ್ಷ ಪ್ರಭುಸ್ವಾಮಿ, ಪಿಡಿಓ ನಂಜುಂಡಸ್ವಾಮಿ, ಪಂಚಾಯಿತಿ ಅಧ್ಯಕ್ಷರಾದ ರೂಪಾ ಹೆಚ್. ಕೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಶಿಕ್ಷಕ ಚಿಕ್ಕರಾಜು ಹಾಗೂ ಗ್ರಾಮದ ಮುಖಂಡರು ಭಾಗವಹಿಸಿದ್ದರು.



ಬೆಳಗಾವಿ ಜಿಲ್ಲೆ, ಅಥಣಿ ತಾಲೂಕಿನಲ್ಲಿ ಎನ್‌ಆರ್‌ಎಲ್‌ಎಂ ವಿಭಾಗದ ಮಾಸ್ಟರ್ ಬುಕ್ ಕೀಪರ್ ಹಾಗೂ ಕೃಷಿ ಸಖಿ, ಪಶು ಸಖಿ ಸದಸ್ಯರಿಗೆ ಸೌರತಂತ್ರಜ್ಞಾನ ಅರಿವು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸೌರಶಕ್ತಿ ಆಧಾರಿತ ಜೀವನೋಪಾಯಕ್ಕೆ ಅನುಕೂಲವಾಗುವ ಉಪಕರಣಗಳ ಕುರಿತು ಸ್ವ-ಉದ್ಯೋಗ ಪರಿಕಲ್ಪನೆಯ ಕಾರ್ಯಾಗಾರವನ್ನು ನಡೆಸಲಾಯಿತು,

ಕಾರ್ಯಾಗಾರದಲ್ಲಿ, ಜಂಟಿ ನಿರ್ದೇಶಕರ ಕಚೇರಿ ವತಿಯಿಂದ ಸರೋಜಿನಿ, ಅಥಣಿ ಕೃಷಿ ನಿರ್ದೇಶಕ ಬಿರಾದಾರ, ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳು, ಸಹಾಯಕ ತಾಂತ್ರಿಕ ವ್ಯವಸ್ಥಾಪಕರು ಮತ್ತು ಕ್ಷೇತ್ರ ತಾಂತ್ರಿಕ ವ್ಯವಸ್ಥಾಪಕರು ಉಪಸ್ಥಿತರಿದ್ದು ಕಾರ್ಯಾಗಾರವು ಯಶಸ್ವಿಯಾಗಿ ಪೂರ್ಣಗೊಂಡಿತು.



SELCO

# Sunಚಲನ

ಮಾರ್ಚ್ 2024 ಸಂಪುಟ 6 ಸಂಚಿಕೆ 3

ಸೆಲ್ಕೋ ಆಂತರಿಕ ಮಾಸಪತ್ರಿಕೆ

**ಸೆಲ್ಕೋ ಸಂಸ್ಥಾಪಕರು**
ಡಾ. ಹರೀಶ ಹಂದೆ

**ಮಾರ್ಗದರ್ಶಕರು**
ಮೋಹನ ಭಾಸ್ಕರ ಹೆಗಡೆ

**ಸಂಪಾದಕ ಮಂಡಳಿ**
ಗುರುಪ್ರಕಾಶ್ ಶೆಟ್ಟಿ
ಕರಿಸ್ವಾಮಿ ಕೆ.
ಮಂಜುನಾಥ ಭಾಗವತ್
ವೇಣುಗೋಪಾಲ್


**ಸಮಗ್ರ ನಿರ್ವಹಣೆ**
ಜಗದೀಶ ಪೈ ಎ.

**ವಿನ್ಯಾಸ**
Madhubani

ಬಿಸಿಲಿನಿಂದ ಬೆಳಕು, ಬಿಸಿಲಿನಿಂದ ಬದುಕು!........................ **ಡಾ. ಹರೀಶ ಹಂದೆ** 4
ಸೂರ್ಯನೆಂಬ ಬೆಳಕಿನ ಕೊಡೆಯ ಕೆಳಗೆ............... **ಸೆಲ್ಕೋ ಸಂಪಾದಕೀಯ ಮಂಡಳಿ** 5
ಭಾರತದ ಅಂತಃಶಕ್ತಿ; ಸುಸ್ಥಿರ ಗ್ರಾಮ ಹಾಗೂ ಮಹಿಳೆ......... **ಮೋಹನ ಭಾಸ್ಕರ ಹೆಗಡೆ** 6
ಬೀಡಿ ಸೂಪಿನ ಮೇಲೆ ಸೌರ ಬೆಳಕು................................................................ 7
ರಾಜ್ಯ ಸರ್ಕಾರದಿಂದ ರೈತ ಸೌರಶಕ್ತಿ ಮೇಳ ........................................ **ಕರಿಸ್ವಾಮಿ ಕೆ.** 8
ಶೋಧನೆಯ ಹೆಜ್ಜೆಗಳಲ್ಲಿ ನಾರಿಯರ ಗೆಜ್ಜೆನಾದ ..........ಮಾತೃಶ್ರೀ ಹೇಮಾವತಿ ಹೆಗ್ಗಡೆ 10
ಸ್ವಾವಲಂಬನೆಗೆ ಸೌರ ತಂತ್ರಜ್ಞಾನ ಸಹಕಾರಿ................................................12
ಆಸರೆಯಿಲ್ಲದ ಬದುಕಿಗೆ ಸೌರಶಕ್ತಿಯೇ ಹರಿಗೋಲು................................. 14
ಆಶಾ ದೀಪವಾದ 'ಸೌರ' ಬೆಳಕು........................................................... 15
ಸ್ವಾವಲಂಬನೆಯ ಬೆಳಕು ಕೈ ಹಿಡಿದಿಲ್ಲವೇನು!........................................... 16
ಸಮೃದ್ಧಿ-ಸಂತೃಪ್ತಿ : ಎಂಪವರ್ ಹರ್.............................ಗುರುಪ್ರಕಾಶ್ ಶೆಟ್ಟಿ 17
ದುಬಾರಿ ದುಬೈ.......................................................................18

## ಭರತವಾಕ್ಯ

**ಪ್ರತಿಯೊಬ್ಬನ ಒಳಗೂ ಒಬ್ಬ ಸೂರ್ಯನಿದ್ದಾನೆ. ಅವನನ್ನು ಬೆಳಗಲು ಬಿಡಬೇಕಷ್ಟೆ !**



– ಸಾಕ್ರೆಟೀಸ್
ಗ್ರೀಕ್ ತತ್ತ್ವಜ್ಞಾನಿ

ಸೆಲ್ಕೋ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್
ನಂ.1361, 9ನೇ ಅಡ್ಡರಸ್ತೆ,
ಜೆ.ಪಿ. ನಗರ, 1ನೇ ಹಂತ, ಬೆಂಗಳೂರು-560078
website: *www.selco-india.com*
Tollfree: 1800 419 0780
ಸೆಲ್ಕೋ ಶಾಖೆಗಳು: ಕರ್ನಾಟಕ (37), ಬಿಹಾರ (4), ಕೇರಳ (1), ತಮಿಳುನಾಡು (2), ಆಂಧ್ರಪ್ರದೇಶ (2), ಮಹಾರಾಷ್ಟ್ರ (4)

ಸೆಲ್ಕೋ ಫೇಸ್‌ಬುಕ್
ಸೆಲ್ಕೋ ಟ್ವೀಟರ್
ಸೆಲ್ಕೋ ಯೂಟ್ಯೂಬ್
ಸೆಲ್ಕೋ ಇನ್‌ಸ್ಟಾಗ್ರಾಮ್
ಸೆಲ್ಕೋ ವೆಬ್‌ಸೈಟ್

ಆಗ ಸೋಲಾರ್ ಎಂಬ ಪರಿಕಲ್ಪನೆಯು ಬರೀ ಬೆಳಕಿಗೆ ಸಂಬಂಧಪಟ್ಟಿತ್ತು. ಆದರೆ, ಈಗ ಅದು ಇನ್ನೊಂದು ಹಂತ ಮೇಲಕ್ಕೇರಿದ್ದು, ಸೌರಶಕ್ತಿ ಆಧರಿಸಿ ಉದ್ಯೋಗ ಕ್ಷೇತ್ರದಲ್ಲಿಯೂ ಹೇಗೆ ಕೆಲಸ ಮಾಡಬಹುದು ಎಂಬುದನ್ನು ನಾವು ಕಂಡುಕೊಂಡಿದ್ದೇವೆ.



ಕ್ಷಿತಿಜ

**ಡಾ. ಹರೀಶ ಹಂದೆ**

ಸೆಲ್ಕೋ ಸಂಸ್ಥಾಪಕರು

# ಬಿಸಿಲಿನಿಂದ ಬೆಳಕು ಬಿಸಿಲಿನಿಂದ ಬದುಕು

ಸೌರಶಕ್ತಿಯನ್ನು ಆಧರಿಸಿ ಜೀವನ ನಡೆಸಬಹುದು ಎಂಬ ಆಲೋಚನೆಯು ಕಾರ್ಯರೂಪಕ್ಕೆ ಬಂದು, ಅದರ ಮೂಲಕ ರಾತ್ರಿ ಬೆಳಕನ್ನು ಪಡೆಯುವ ತಂತ್ರಜ್ಞಾನ ಬಹಳ ಹಿಂದೆಯೇ ಸಿದ್ಧವಾಯಿತು. ಆದರೆ, ಕೇವಲ ತಂತ್ರಜ್ಞಾನವಷ್ಟೇ ಸಿದ್ಧಗೊಂಡರೆ ಸಾಲದು. ಅದನ್ನು ಬಳಸಿಕೊಳ್ಳುವ ಮೂಲಕ ಜನರು ತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಳ್ಳುವಂತಾಗಬೇಕು. ಈ ಪ್ರಕ್ರಿಯೆಯಲ್ಲಿ ಅವರಿಗೆ ಸೌರತಂತ್ರಜ್ಞಾನದ ಮೇಲೆ ವಿಶ್ವಾಸ ಮೂಡಬೇಕು. ಈ ವಿಶ್ವಾಸ ಮೂಡುವ ಪ್ರಕ್ರಿಯೆ ಎಷ್ಟು ಸಮಯ ತೆಗೆದುಕೊಳ್ಳುತ್ತದೋ, ಅಷ್ಟು ಸಮಯವನ್ನು ಸಂಕ್ರಮಣ ಕಾಲ ಎಂದು ಹೇಳಬಹುದು. ಇದೀಗ ಜನರು ಸೌರತಂತ್ರಜ್ಞಾನದ ಮೇಲೆ ವಿಶ್ವಾಸ ಹೊಂದಿದ್ದು, ಅದು ಕೇವಲ ಬೆಳಕಿಗೆ ಸೀಮಿತವಾಗದೇ ಇನ್ನಷ್ಟು ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ.

ಎಸ್‌ಕೆಡಿಆರ್‌ಡಿಪಿ ಮತ್ತು ಸೆಲ್ಕೋ ಸೋಲಾರ್ ಲೈಟ್ ಸಂಸ್ಥೆಯ ಬಾಂಧವ್ಯ ಬಹಳ ದೀರ್ಘವಾದುದು. 1998–2003ರ ಅವಧಿಯಲ್ಲಿ ಬೆಳಕಿಗೆ ಸಂಬಂಧಪಟ್ಟಂತೆ ನಾವು ರೂಪಿಸಿರುವ ಸೋಲಾರ್ ಮಾದರಿಗಳು, ದೇಶದಲ್ಲಿಯೂ, ವಿದೇಶದಲ್ಲಿಯೂ ಹಲವಾರು ಜನರಿಗೆ ಸಹಾಯವಾಗಿದೆ. ಬ್ರೆಜಿಲ್, ಇಂಡೋನೇಷ್ಯಾದಲ್ಲಿಯೂ ಈ ಮಾದರಿ ಬಳಕೆಗೆ ಬಂತು. ಈ ಮಾದರಿಗಳು 2015ರವರೆಗೂ ಬಳಕೆಯಲ್ಲಿದ್ದವು. ಆಗ ಸೋಲಾರ್ ಎಂಬ ಪರಿಕಲ್ಪನೆಯು ಬರೀ ಬೆಳಕಿಗೆ ಸಂಬಂಧಪಟ್ಟಿತ್ತು. ಆದರೆ, ಈಗ ಅದು ಇನ್ನೊಂದು ಹಂತ ಮೇಲಕ್ಕೇರಿದ್ದು, ಸೌರಶಕ್ತಿ ಆಧರಿಸಿ ಉದ್ಯೋಗ ಕ್ಷೇತ್ರದಲ್ಲಿಯೂ ಹೇಗೆ ಕೆಲಸ ಮಾಡಬಹುದು ಎಂಬುದನ್ನು ನಾವು ಕಂಡುಕೊಂಡಿದ್ದೇವೆ. ಕಬ್ಬಿನ ಹಾಲು, ನೀರಿನ ಪಂಪ್, ರೋಟಿ ರೋಲಿಂಗ್ ಯಂತ್ರ, ಹೊಲಿಗೆ ಯಂತ್ರ ಸೇರಿದಂತೆ ಅನೇಕ ಯಂತ್ರಗಳು ಈಗ ಸೋಲಾರ್‌ನಿಂದ ನಡೆಯುತ್ತವೆ ಎಂಬ ವಿಶ್ವಾಸ ಜನರಲ್ಲಿ ಮೂಡುತ್ತಿದೆ. ಇದನ್ನು ಆರಂಭಿಸಲು ಬೇಕಾದ ಮೂಲ ಬಂಡವಾಳವನ್ನು ಎಸ್‌ಕೆಆರ್‌ಡಿಪಿಯಿಂದ ಹಾಗೂ ಹಲವಾರು ಬ್ಯಾಂಕ್‌ಗಳಿಂದ ಹಲವಾರು ಯುವಕರು, ಮಹಿಳೆಯರು ಪಡೆದಿದ್ದಲ್ಲದೆ, ಐದು ವರ್ಷಗಳಲ್ಲಿ ಅದನ್ನು ಮರುಪಾವತಿ ಮಾಡುವಲ್ಲಿಯೂ ಯಶಸ್ವಿಯಾಗಿದ್ದಾರೆ. ಇದು ಸಹಭಾಗಿತ್ವದ ಯಶಸ್ಸಿನ ಪ್ರಧಾನ ಲಕ್ಷಣ.




ಎಸ್‌ಕೆಆರ್‌ಡಿಪಿ, ಧರ್ಮಸ್ಥಳ ಟ್ರಸ್ಟ್ ಮತ್ತು ಸೆಲ್ಕೋ ಸಹಭಾಗಿತ್ವದಲ್ಲಿ ಸೋಲಾರ್ ಕ್ಷೇತ್ರದಲ್ಲಿ ನಡೆದಿರುವ ಕೆಲಸಗಳನ್ನು ಜಗತ್ತಿನಾದ್ಯಂತ ಒಂದು ಕೋಟಿಗೂ ಹೆಚ್ಚು ಜನರು ಪ್ರೇರಣೆ ಪಡೆದು ಅನುಸರಿಸಿದ್ದಾರೆ. ಪ್ರಸ್ತುತ ಮಹಿಳೆಯರು ಜೀವನೋಪಾಯ ಪರಿಕರಗಳನ್ನು ಪಡೆದಿದ್ದರೆ, ಮುಂದಿನ ಐದು ವರ್ಷಗಳಲ್ಲಿ ಈ ಪ್ರಯತ್ನವೂ ಒಂದು ಕೋಟಿ ಜನರನ್ನು ತಲುಪುವಂತಾಗಬೇಕು ಎಂಬುದು ನನ್ನ ಆಶಯ. ಸೌರದೀಪದ ಕ್ಷೇತ್ರದಲ್ಲಿ ಆಗಿರುವ ಕ್ರಾಂತಿ, ಜೀವನೋಪಾಯ ಕ್ಷೇತ್ರದಲ್ಲಿಯೂ ಆಗಬೇಕು. ಅದರಲ್ಲಿಯೂ ಇಪ್ಪತ್ತು ಆಫ್ರಿಕನ್ ರಾಜ್ಯಗಳಲ್ಲಿ ಈ ಮಾದರಿಯನ್ನು ಪರಿಚಯಿಸುವ ಉದ್ದೇಶವಿದೆ. ಎಸ್‌ಕೆಆರ್‌ಡಿಪಿ ಜೊತೆ ಜೊತೆಗೆ ಸೆಲ್ಕೋ ವತಿಯಿಂದ, ಆಫ್ರಿಕನ್ ರಾಜ್ಯಗಳ ಮಹಿಳೆಯರಿಗೂ ಈ ಅರಿವನ್ನು ತಲುಪಿಸುವ ಪ್ರಯತ್ನ ಮಾಡಬೇಕಾಗಿದೆ. ಇದು ತಾತ್ಕಾಲಿಕ ವ್ಯವಹಾರವಲ್ಲ, ನಿರಂತರ ಮಾಡುತ್ತಿರಬೇಕಾದ ಪ್ರಯೋಗ. ಇದು ಯಶಸ್ಸು ತಂದರೆ ಸುಸ್ಥಿರ ಕುಟುಂಬ, ಸುಸ್ಥಿರ ಬದುಕು.

# ಸೂರ್ಯನೆಂಬ ಬೆಳಕಿನ ಕೊಡೆಯ ಕೆಳಗೆ

ಮಹಿಳಾ ದಿನಾಚರಣೆ ಎಂಬುದು ಒಂದು ಸಾಂಕೇತಿಕ ಕಾರ್ಯಕ್ರಮವಾದರೂ ಈ ನೆಪದಲ್ಲಿ ಮಹಿಳೆಯರ ಏಳಿಗೆಯ ಬಗ್ಗೆ ಯೋಚನೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಮನೆಯ ಸೂತ್ರಧಾರಿಣಿ, ಮಾರ್ಗದರ್ಶಕಿ ಆಗಿರುವ ಮಹಿಳೆಯು ಎಲ್ಲ ದಿನಗಳಲ್ಲಿಯೂ ಕೇಂದ್ರ ಬಿಂದುವೇ ಆಗಿರುತ್ತಾಳೆ. ಆದರೆ, ಅವಳೇ ಕೇಂದ್ರಬಿಂದು ಎಂದು ಜಗತ್ತೇಕೋ ಒಪ್ಪಿಕೊಳ್ಳುವುದಕ್ಕೆ ನಿರಾಕರಿಸುತ್ತದೆ. ಹಾಗಾಗಿ ಮಹಿಳಾ ದಿನದಂತಹ ಕೆಲವು ಆಚರಣೆಗಳು ಅಗತ್ಯವೆನಿಸುತ್ತದೆ.

ಅದೇನೇ ಇರಲಿ, ಸೆಲ್ಕೋ ಸಂಸ್ಥೆಯ ಕಾರ್ಯೋದ್ದೇಶಗಳೇನಿದ್ದರೂ ಅದು ಮನೆಯನ್ನು ನಿಭಾಯಿಸುವ ಮಹಿಳೆಗೆ ನೆರವಾಗುವ ದೃಷ್ಟಿಯನ್ನು ಹೊಂದಿದೆ. ಯಾಕೆಂದರೆ ಮಹಿಳೆಯ ಸಂಪಾದನೆ, ಆಕೆಯ ಕ್ಷಮತೆಯು ಕುಟುಂಬಿಕರನ್ನು ಕೇಂದ್ರೀಕರಿಸುತ್ತದೆ ಎಂಬುದನ್ನು ಸೆಲ್ಕೋ ಸಂಸ್ಥೆ ಅರಿತುಕೊಂಡಿದೆ. ಆದ್ದರಿಂದ ಸೌರ ದೀಪಗಳಿರಬಹುದು, ಜೀವನೋಪಾಯ ಪರಿಕರಗಳ ಸರಣಿಯಿರಬಹುದು, ಅವುಗಳನ್ನು ಮಹಿಳೆಯರೇ ಹೆಚ್ಚು ಬಳಸುತ್ತಿದ್ದಾರೆ. ಅದರಿಂದ ಆಗುವ ಪ್ರಯೋಜನಗಳೇನು ಎಂಬದುನ್ನು ಅವರೇ ಅರಿತುಕೊಂಡಿದ್ದಾರೆ.

ಅನೇಕ ಮಹಿಳೆಯರು ತಮ್ಮ ಜೀವನದ ಅತ್ಯಂತ ಕಷ್ಟದ ದಿನಗಳಲ್ಲಿ ಸೌರಶಕ್ತಿಯೆಂಬ ಸೇತುವೆಯ ಆಸರೆ ಹಿಡಿದು ಕಷ್ಟವೆಂಬ ನದಿಯನ್ನು ದಾಟಿದ ಉದಾಹರಣೆಗಳಿವೆ. ಸಂಚಲನದಲ್ಲಿ ಪ್ರಕಟವಾದ ಜೀವನೋಪಾಯ ಪರಿಕರಗಳ ಸರಣಿಯನ್ನು ಗಮನಿಸಿದರೆ ಇಂತಹ ಅನೇಕ ಉದಾಹರಣೆಗಳನ್ನು ಗಮನಿಸಬಹುದು. ಈ ವೇಗದ ಓಟದಲ್ಲಿ ತಲ್ಲೀನವಾಗಿರುವ ಸಮಾಜವು, ವಿವಿಧ ಕಾರಣಗಳಿಂದಾಗಿ ಸಮಾಜದ ಅಂಚಿನಲ್ಲಿರುವ ವರಿಗೆ ಕೈಯ್ಯಾಸರೆಯಾಗುವ ವ್ಯವಧಾನವನ್ನು ಹೊಂದಿರುವುದು ಕಡಿಮೆಯೇ. ಆದರೆ, ಅಂತಹ ವ್ಯವಧಾನವನ್ನು ಹೊಂದಿರುವ, ಕಷ್ಟವನ್ನು ಆಲಿಸಿ ಅದಕ್ಕೆ ತಕ್ಕಂತಹ ಪರಿಹಾರವನ್ನು ಕಂಡುಕೊಳ್ಳುವ ಸಾವಧಾನವನ್ನುಸೆಲ್ಕೋ ಸಂಸ್ಥೆ ಹೊಂದಿದೆ. ಅಂತಹ ಪರಿಹಾರ ಪರಿಕರಗಳುಇತರ ಅನೇಕರಿಗೆ ಮಾದರಿಯಾಗಿವೆ.

ಜ್ಞಾನ ಮತ್ತು ಶಿಕ್ಷಣವು ಸಮಾಜದ ಎಲ್ಲರ ಏಳಿಗೆಗೆ ಮತ್ತು ಎಲ್ಲರ ಜೀವನ ಸುಧಾರಣೆಗೆ ಬಳಕೆಯಾಗಬೇಕು ಎಂಬ ಆಶಯದೊಂದಿಗೆ ಸೆಲ್ಕೋ ಸಂಸ್ಥೆ ಈ ಕೆಲಸ ಮಾಡುತ್ತಿದೆ. ಮಹಿಳಾ ದಿನದ ಸಂದರ್ಭದಲ್ಲಿ ಸಂಚಲನ ಪತ್ರಿಕೆಯು ಮಹಿಳೆಯರ ಯಶೋಗಾಥೆಯನ್ನೇ ಪ್ರಧಾನವಾಗಿ ತೆಗೆದುಕೊಂಡಿದೆ. ಅದೇ ರೀತಿ ಸಂತೃಪ್ತ- ಸಮೃದ್ಧಿ ಎಂಬ ಶೀರ್ಷಿಕೆಯಡಿ ಧರ್ಮಸ್ಥಳದಲ್ಲಿ ನಡೆದ ಮಹಿಳಾ ಉದ್ಯಮಿಗಳ ಕಾರ್ಯಾಗಾರದ ವರದಿಯನ್ನೂ ನೀಡಿದೆ. ಒಂದು ಪ್ರಯತ್ನದ ವಾಸ್ತವ ಚಿತ್ರಣ ಕಥೆಯಾಗಿ ಕಥೆಯು ಮತ್ತೊಬ್ಬರ ಜೀವನಕ್ಕೆ ಬೆಳಕಾಗಬಲ್ಲುದಾದರೆ, ಅಂತಹ ಪ್ರಯತ್ನವನ್ನು ಪರಿಚಯಿಸಲು ಸಂಚಲನವೂ ಉತ್ಸುಕವಾಗಿದೆ.

ಓದುಗರ ಬೆಂಬಲವಿರಲಿ ಎಂಬ ಆಶಯ ದೊಂದಿಗೆ ಈ ಸಂಚಿಕೆಯನ್ನು ನಿಮ್ಮ ಕೈಲಿಡುತ್ತಿದ್ದೇವೆ.

**ಸೆಲ್ಕೋ ಸಂಪಾದಕೀಯ ಮಂಡಳಿ**
*networkingteam@selco-india.com*
ಸಂಪರ್ಕ : 9880715843





ಮೋಹನ ಭಾಸ್ಕರ ಹೆಗಡೆ
ಸಿಇಓ, ಸೆಲ್ಕೋ ಇಂಡಿಯಾ

# ಭಾರತದ ಅಂತಃಶಕ್ತಿ ಸುಸ್ಥಿರ ಗ್ರಾಮ ಹಾಗೂ ಮಹಿಳೆ

ಭಾರತವನ್ನು ನೆನಪಿಸಿಕೊಳ್ಳುವಾಗಲೆಲ್ಲ ಕಾಣುವುದು ವೈವಿಧ್ಯ ಹಾಗೂ ಸಮೃದ್ಧವಾದ ಸಂಸ್ಕೃತಿ. ಈ ನೆಲದ ಗಂಧವನ್ನು ಬೆಳೆಸಿ ಬದುಕುವ ಕಲೆ, ಪರಿಸರದೊಂದಿಗೇ ಮೇಳೈಸಿ ಹೊಂದುವ ಅಭಿವೃದ್ಧಿ, ಹಾಸುಹೊಕ್ಕಾಗಿರುವ ಥರ ಥರದ ಗುಡಿ ಕೈಗಾರಿಕೆ- ಗೃಹೋದ್ಯಮಗಳ ವೈಭವ, ಮಹದಾನಂದ ನೀಡುವ ಗ್ರಾಮೀಣ ಕಲೆಗಳ ಮಹತಿ, ಇವೆಲ್ಲವೂ ಹೇಗೆ ಸುಸ್ಥಿರ ಗ್ರಾಮದ ಪರಿಕಲ್ಪನೆಗೆ ಸಹಕಾರಿ, ಪ್ರತಿಯೊಂದು ಕುಟುಂಬದ ಆಧಾರಕ್ಕೆ ಹಾಗೂ ಸಬಲೀಕರಣಕ್ಕೆ ಪೂರಕ ಎಂಬುದು ತಿಳಿಯುತ್ತದೆ.

ಒಂದು ಕಾಲದಲ್ಲಿ ಅದೆಷ್ಟೋ ವಿಶೇಷ ಸಾಧ್ಯತೆಗಳು ಪ್ರತಿಭೆಗಳು ಸ್ವಸಂತೋಷಕ್ಕೆ ಮಾತ್ರ ಸೀಮಿತವಾಗಿದ್ದವೋ ಅವೆಲ್ಲವೋ ಈಗ ಜೀವನಾಧಾರದ ಉದ್ಯೋಗಗಳಾಗಿವೆ. ಆರ್ಥಿಕ ಹಾಗೂ ಆದಾಯದ ಮೂಲವಾಗಿವೆ. ಸಂಖ್ಯೆಗಳೇ ಮಾನದಂಡವೆಂದಿದ್ದದ್ದು ಈಗ ಪರಿಣಾಮಗಳು ಮಾನದಂಡ ಎಂಬಂತಾಗಿದೆ. ಎಲ್ಲ ರೀತಿಯ ವಸ್ತು-ವಿಷಯ-ವಿದ್ಯೆಗಳು ಇಂದು ಸೀಮೆಯನ್ನು ದಾಟಿ, ಉದ್ದೇಶ ಈಡೇರಿಸಿ, ಅತ್ಯುನ್ನತ ಪರಿಣಾಮವನ್ನು ಉಂಟುಮಾಡಿವೆ. ಜಾಗತಿಕ ಮಟ್ಟದ ಮಾರುಕಟ್ಟೆಯ ಜಾಗವನ್ನು ಹೊಂದಿದೆ. ಗುಣ ಗೌರವದ ಗುರುತಿಸುವಿಕೆ ಹಾಗೂ ಪ್ರಯೋಜನ ಪಡೆಯುವ ಮನೋಭಾವ ವ್ಯಾಪಕವಾಗಿ ಕಾಣುತ್ತಿವೆ.

ಪ್ರಸ್ತುತ ಸೆಲ್ಕೋ ಸಂಸ್ಥೆಯು ಮೂವತ್ತು ವರ್ಷಗಳ ಗಾಮೀಣ ಬದುಕಿನೊಡನೆಯೇ ಸಾಗುತ್ತ ಬಂದ ಅನುಭವದಲ್ಲಿ ಹಾಗೂ ಕಳೆದ ಹದಿನೈದು ವರ್ಷಗಳ ನಿರಂತರ ಸಂಶೋಧನೆಯಲ್ಲಿ ನೂರಾರು ಜೀವನಾಧಾರ ಉತ್ಪನ್ನಗಳನ್ನು ಪರ್ಯಾಯ ಶಕ್ತಿಯನ್ನು ಆಧರಿಸಿ ಸಿದ್ಧಪಡಿಸಿದೆ. ಅವುಗಳಲ್ಲಿ ಬಹುತೇಕ ಉತ್ಪನ್ನಗಳು ಯಶಸ್ವಿಯಾಗಿವೆ. ಇನ್ನೂ ಹಲವು ರೀತಿಯ ಸಂಶೋಧನೆಗಳು ನಡೆಯುತ್ತ ಇವೆ. ನಮ್ಮ ಯೋಜನೆ ಹಾಗೂ ಯೋಜನೆಯ ದೃಷ್ಟಿಯು ಸರಳವಾಗಿದೆ, ಆದರೆ ವಿಶೇಷವಾಗಿದೆ.

**- ಮೊದಲನೆಯದಾಗಿ,** ಯಾವುದೇ ಉಪಕರಣವನ್ನು ಪರ್ಯಾಯ ಇಂಧನದ ಆಧಾರದಲ್ಲಿ ಬಳಸುವಾಗ ಅದು ನಿರಾತಂಕವಾಗಿ ಕಾರ್ಯ ನಿರ್ವಹಿಸುವಂತಿರಬೇಕು ಎಂಬುದು ನಮ್ಮ ನಿಲುವು.

**- ಎರಡನೆಯದಾಗಿ,** ಉಪಕರಣಗಳು ಅಥವಾ ಯಂತ್ರಗಳು ಗ್ರಾಮೀಣ ಅಥವಾ ಪ್ರಾದೇಶಿಕ ಹಾಗೂ ವ್ಯಕ್ತಿಯ ಕೈಗುಣದ ಮೂಲ ಸ್ವಾದವನ್ನು ಮರೆ ಮಾಚುವಂತಿರಬಾರದು.

- ಸಾಮಾಜಿಕ ಸೊಗಸಿಗೆ ಪ್ರಥಮ ಆದ್ಯತೆ ನೀಡಲಾಗುತ್ತದೆ ಹೊರತು ಆರ್ಥಿಕವಾದ ಪ್ರಭಾವವನ್ನು ಮಾತ್ರವಲ್ಲ, ಇದರ ಭಾವವನ್ನು ಗ್ರಹಿಸಬೇಕು!

- ಆರ್ಥಿಕ ಸಮತೋಲನಕ್ಕಾಗಿ ಹಾಗೂ ಆತ್ಮವಿಶ್ವಾಸ ವೃದ್ಧಿಗಾಗಿ ಭದ್ರತೆಯನ್ನು ಒದಗಿಸುವುದು ಹಾಗೂ ಸ್ಥಿರವಾಗುವವರೆಗೆ ಜೊತೆಯಾಗಿ ನಿಲ್ಲುವುದು ನಮ್ಮ ಧ್ಯೇಯ.

- ಕೊನೆಯದಾಗಿ ಉತ್ಪಾದಕರು- ಉದ್ಯಮಿಗಳು ಹಾಗೂ ಗ್ರಾಹಕರ ನಡುವೆ ಪ್ರಾಮಾಣಿಕ ಮಧ್ಯವರ್ತಿಗಳಾಗಿ ಸಂಪದಭಿವೃದ್ಧಿ ಹಾಗೂ ಸಮಾಧಾನ ದೊರೆಯುವುದರ ಜೊತೆಗೆ ತಲೆಮಾರಿನ ನಡುವೆ ಕೊಂಡಿಯಾಗಿ ಭಾರತೀಯ ಜ್ಞಾನ ಪರಂಪರೆಯ ಉಳಿವಿಗೆ ಯತ್ನಿಸುವುದು.

ಇದು ಒಂದು ಮಹಾ ಆಂದೋಲನವಾಗಿ ದಾಖಲಾಗಬೇಕಾದ ಸಂಗತಿ. ಮೂವತ್ತು ವರ್ಷಗಳ ಹಿಂದೆ ಡಾ ಹರೀಶ್ ಹಂದೆಯವರು ಪರ್ಯಾಯ ಶಕ್ತಿ ಬಗೆಗೆ ಚಿಂತಿಸಿ ಬೆಳಕು ನೀಡಿದ್ದು ಹಾಗೂ ಆಗಲೇ ಡಾ ವೀರೇಂದ್ರ ಹೆಗ್ಗಡೆಯವರು ಇವುಗಳ ದೂರಗಾಮಿ ಪ್ರಯೋಜನವನ್ನು ಮನಗಂಡು, ತಮ್ಮ ಎಸ್‌ಕೆಡಿಆರ್‌ಡಿಪಿ ಸಂಸ್ಥೆಯಲ್ಲಿಯೂ ಅಳವಡಿಸಿ, ಎಲ್ಲರನ್ನೂ ಈ ಕಾರ್ಯದಲ್ಲಿ ತೊಡಗಿಕೊಳ್ಳುವಂತೆ ಪ್ರೋತ್ಸಾಹಿಸಿ, ಅನುಷ್ಠಾನಗೊಳಿಸಿದ್ದು ಭಾರತದ ಪರ್ಯಾಯ ಇಂಧನದ ಸಾಧನೆ- ಸಾಧ್ಯತೆಯ ಪುಟದಲ್ಲಿ ದಾಖಲಾಗಬೇಕಾದದ್ದು. ಈ ಕೇಂದ್ರ ಸರ್ಕಾರವೂ ಸಹ ಸೌರಶಕ್ತಿಯ ಮಹಾ ಆಂದೋಲನವನ್ನು ಮಾಡುತ್ತಿರುವುದರ ಹಿಂದೆ ಈ ಎಲ್ಲ ವಿಚಾರಗಳು, ಪ್ರಗತಿಯ ಪಥದಲ್ಲಿರುವುದು ನಮಗೆಲ್ಲ ಅಭಿಮಾನ.

ಈ ಎಲ್ಲ ಗ್ರಾಮೀಣ ಅಭಿವೃದ್ಧಿಯ ಮುಖ್ಯ ಶಕ್ತಿ ಮಹಿಳೆಯರು. ಅವರಲ್ಲಿಯೇ ಜೀವನಾಧಾರದ ಎಲ್ಲ ಬೌದ್ಧಿಕ ಬಂಡವಾಳವಿದೆ. ಆರ್ಥಿಕ ಹಾಗೂ ಮಾರುಕಟ್ಟೆಯ ಹೊಂದಾಣಿಕೆ ತೀವ್ರವಾಗಿ ದೃಢವಾದರೆ ಇದನ್ನು ಯಶಸ್ವಿಗೊಳಿಸಬಹುದು ಎಂಬುದು ಈಗ ತಿಳಿದ ಸತ್ಯ.

ಈ ಸೆಲ್ಕೋ ಹೊತ್ತಿಗೆ ಸಾಧಕರ ಸಾಧನಾ ಪಥದ ಮಾಹಿತಿ ಹೊಂದಿದೆ ಹಾಗೂ ಸುಸ್ಥಿರತೆಯ ನೈಜ ಚಿತ್ರಣ ನೀಡುತ್ತದೆ. ಇದು ಸಾಮಾಜಿಕ ಉದ್ಯಮದ ಆಂದೋಲನ.

ಪ್ರತಿಭೆ- ಶ್ರಮ- ಸಮಯಗಳ ಹೊಂದಾಣಿಕೆಯಿಂದ ಜೀವನಾಧಾರವಾಗಿ ನೆಲೆಗೊಳ್ಳುವ ಸಾಧ್ಯತೆಯನ್ನು ಲಕ್ಷಾಂತರ ಜನರು ಅರಿಯುವಂತೆ ಹಾಗೂ ಅನುಸರಿಸುವಂತೆ ಆಗಬೇಕೆಂಬುದೇ ಸೆಲ್ಕೋದ ಆದ್ಯತೆ ಹಾಗೂ ಭರವಸೆ.ಇದರಲ್ಲಿ ಎಸ್‌ಕೆಡಿಆರ್‌ಡಿಪಿಯ ಸಹಭಾಗಿತ್ವ ಸದಾ ಉನ್ನತ ಹಾಗೂ ಸಕಾಲಿಕ!

# ಬಾಡಿದ ಬದುಕಿನ ಮೇಲೆ ಸೌರ ಬೆಳಕು

ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ಇರುವ ಚಂದದ ಸಂಸಾರದಲ್ಲಿ ಅಪ್ಪ ಅಮ್ಮನ ಮನದಲ್ಲಿ ಸಂತೃಪ್ತಿಯು ಮನೆಮಾಡಿತ್ತು. ಮಂಗಳೂರಿನ ಕುಂಜತ್‌ಬೈಲ್‌ನಲ್ಲಿ ಒಂದು ಪುಟ್ಟ ಮನೆ. ಅಲ್ಲಿ ಬೀಡಿಕಟ್ಟುತ್ತಿದ್ದ ಜರೀನಾ ಕುಂಜತ್‌ಬೈಲ್ ಅವರ ಭರವಸೆಯೆಲ್ಲ ತಮ್ಮ ಮುದ್ದಿನ ಮಕ್ಕಳ ಮೇಲೆ. ಹೇಗಾದರೂ ಇವರು ಉತ್ತಮ ಶಿಕ್ಷಣ ಪಡೆದರೆ ಬದುಕಿನ ಎಲ್ಲ ಕಷ್ಟಗಳು ಕಳೆಯಬಹುದು ಎಂಬ ಕನಸು ಅವರದ್ದು. ಆದರೆ ಅಂದುಕೊಂಡಂತೆ ಬದುಕು ನಡೆಯುವುದೇ? ಪತಿಗೆ ಬಾಯಿಯ ಕ್ಯಾನ್ಸರ್ ಎಂದು ಗೊತ್ತಾಯಿತು. ಪತಿಯನ್ನು ಅದು ಬಲಿ ಪಡೆದೂ ಆಯಿತು. ಈಗ ಜರೀನಾ ಅವರ ಬೀಡಿಯ ಮಜೂರಿಯೇ ಕುಟುಂಬದ ಆದಾಯದ ಮೂಲ.

ರಾತ್ರಿ ಹಗಲೆನ್ನದೆ ಬೀಡಿ ಕಟ್ಟಿ ಸಂಪಾದನೆ ಮಾಡಲು ಜರೀನಾ ಸಜ್ಜಾಗಿದ್ದರು. ಆದರೆ ರಾತ್ರಿ ಕೈಕೊಡುವ ವಿದ್ಯುತ್. ಹೆಚ್ಚು ಹೊತ್ತು ಚಿಮಿಣಿ ಬೆಳಕಿನಲ್ಲಿ ಕುಳಿತು ಬೀಡಿ ಕಟ್ಟುವುದು ಸಾಧ್ಯವಾ ಗುತ್ತಿರಲಿಲ್ಲ.




ಇಂತಹ ಹೊತ್ತಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಎಸ್‌ಕೆಆರ್ ಡಿಪಿ) ಮೂಲಕ ಸೆಲ್ಕೋದ ಸಂಪರ್ಕಕ್ಕೆ ಬಂದ ಜರೀನಾ ಅವರು, ಪರ್ಯಾಯವಾಗಿ ಸೌರಶಕ್ತಿಯ ಸಂಪರ್ಕ ಪಡೆದರು.

ಸುಮಾರು ಏಳು ಟ್ಯೂಬ್ ಲೈಟ್‌ಗಳು ದಿನವಿಡೀ ನಿರಂತರವಾಗಿ ಕೆಲಸ ಮಾಡಬಹುದಾದ ಸೌರಶಕ್ತಿ ವ್ಯವಸ್ಥೆಯನ್ನು ಅಳವಡಿಸಿಕೊಂಡ ಅವರು, ಅದಕ್ಕೆ ತಗಲಿದ ಖರ್ಚನ್ನು ಎಸ್‌ಕೆಆರ್‌ಡಿಪಿಯಿಂದ ದೊರೆಯುತ್ತಿದ್ದ ಸಾಲ ಪಡೆದು ಭರಿಸಿದರು.

ಅವರು ನಾಲ್ಕು ವರ್ಷಗಳಿಂದ ಸೋಲಾರ್ ದೀಪವನ್ನು ಬಳಸುತ್ತಿದ್ದಾರೆ. ಈಗ ಇಬ್ಬರು ಹೆಣ್ಣು ಮಕ್ಕಳ ಮದುವೆ ನೆರವೇರಿಸಿದ್ದಾರೆ. ಮಗನನ್ನು ದುಡಿಮೆಗಾಗಿ ದುಬೈಗೆ ಕಳುಹಿಸಿದ್ದಾರೆ.

**ಗೌರವಾನ್ವಿತ ಶಾಸಕ, ಮಾಜಿ ಸಚಿವ ಸುರೇಶ್ ಕುಮಾರ್...**



Suresh Kumar S

SELCO ಎಂಬ ಸಂಸ್ಥೆಯ ಮಾಸಪತ್ರಿಕೆ Sunಚಲನ ದ ಇತ್ತೀಚಿನ ಸಂಚಿಕೆ ಸಿಕ್ಕಿತು. ಅದರಲ್ಲಿಯ ಎಲ್ಲಾ ಲೇಖನಗಳು ಪ್ರೇರಣಾದಾಯಿ.

ವಿಶೇಷವಾಗಿ "ಕಗ್ಗತ್ತಲ ಕಾಡಿನಲ್ಲಿ ಬೆಳಕಿನ ನೆರವು" ಲೇಖನ ನನಗೆ ಆ ಒಂದು ಗ್ರಾಮ ಪಂಚಾಯಿತಿಯ ಕಾರ್ಯ ಮತ್ತು ಸೆಲ್ಕೊ ಸಂಸ್ಥೆ ಮಾಡಿರುವ ಕಾರ್ಯ ದ ಪರಿಚಯ ನೀಡಿತು.

ಸೆಲ್ಕೋ ಸಂಸ್ಥೆಯ ಈ Sunಚಲನ ಮಾಸಪತ್ರಿಕೆಯ ಮಾರ್ಗದರ್ಶಕರಾದ ಶ್ರೀ ಮೋಹನ ಭಾಸ್ಕರ ಹೆಗಡೆ ಯವರಿಗೆ ಫೋನಾಯಿಸಿ ನನ್ನ ಅಭಿನಂದನೆ ತಿಳಿಸಿದೆ.

ಅಷ್ಟೇ ಅಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ನವರ ಕೆಡೇಲು ಪ್ರದೇಶಕ್ಕೆ ಭೇಟಿ ನೀಡಿ ಕೊರಗ ಮಲೆ ಕುಡಿಯ ಮತ್ತು ಕಮಲ ದಂಪತಿಗಳನ್ನು ಮಾತನಾಡಿಸುವ ನನ್ನ ಇರಾದೆ ವ್ಯಕ್ತ ಪಡಿಸಿದೆ.

ಅವರೂ ಅತ್ಯಂತ ಸಂತಸದಿಂದ ಪೂರಕವಾಗಿ ಸ್ಪಂದಿಸಿದ್ದಾರೆ.

ಸೆಲ್ಕೊ ಸಂಸ್ಥೆಯ ಈ ಹೃದಯಸ್ಪರ್ಶಿ ಕಾರ್ಯಕ್ಕೆ ನನ್ನ ಧನ್ಯವಾದಗಳು.

# ರಾಜ್ಯ ಸರ್ಕಾರದಿಂದ ರೈತ ಸೌರಶಕ್ತಿ ಮೇಳ




ಸಂದರ್ಶನ ಕರಿಸ್ವಾಮಿ ಕೆ.

**ಜನಸಾಮಾನ್ಯರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಜಾಗತಿಕ ಇಂಧನ ಕ್ಷೇತ್ರದಲ್ಲಿ ಸೌರಶಕ್ತಿ ಕುರಿತ ತಮ್ಮ ಮುನ್ನೋಟವನ್ನು ತಿಳಿಸಬಹುದಾ?**

ನವೀಕರಿಸಬಹುದಾದ ಇಂಧನ ಮೂಲಗಳಲ್ಲಿ ಒಂದಾದ ಸೌರಶಕ್ತಿಯು ಜಗತ್ತಿನ ಬಹುತೇಕ ದೇಶಗಳಲ್ಲಿ ದೊರೆಯಬಹುದಾದ ನೈಸರ್ಗಿಕ ಇಂಧನ ಶಕ್ತಿಯಾಗಿದೆ. ಸೌರಫಲಕಗಳ ಕಾರ್ಯಕ್ಷಮತೆಯ ಅವಧಿಯು *(Life of the Panel)* ಕನಿಷ್ಠ 25 ವರ್ಷಗಳಾಗಿರುವುದರಿಂದ ಕೇವಲ ಒಂದು ಬಾರಿ ಮಾತ್ರ ವೆಚ್ಚ ಭರಿಸಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಸೌರಶಕ್ತಿಯಿಂದ ವಿದ್ಯುತ್ ಉತ್ಪಾದನಾ ವೆಚ್ಚದಲ್ಲಿ ಗಣನೀಯ ಇಳಿಕೆ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ರೈತರನ್ನು ಒಳಗೊಂಡು ಪ್ರತಿ ಜನಸಾಮಾನ್ಯರೂ ಕೂಡ ಸೂರ್ಯನ ಬೆಳಕನ್ನು ಉಪಯೋಗಿಸಿಕೊಂಡು ಕಡಿಮೆ ದರದಲ್ಲಿ ವಿದ್ಯುತ್ ಉತ್ಪಾದಿಸಿ ತಮ್ಮ ವಿದ್ಯುತ್ ಬೇಡಿಕೆಯನ್ನು ಪೂರೈಸಿಕೊಳ್ಳಬಹುದು. ಈ ಮೂಲಕ ಪ್ರತಿ ಜನ ಸಾಮಾನ್ಯರೂ ನಿಸರ್ಗ/ಪರಿಸರವನ್ನು ರಕ್ಷಿಸುವಲ್ಲಿ ಹಾಗೂ ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆಗೊಳಿಸಿ ಜಾಗತಿಕ ತಾಪಮಾನ ಹಾಗೂ ಹವಾಮಾನದಲ್ಲಿ ಆಗುವ ವ್ಯತಿರಿಕ್ತ ಪರಿಣಾಮಗಳನ್ನು ತಡೆಯಬಹುದಾಗಿದೆ. ರಾಜ್ಯಸರ್ಕಾರವು ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಕನಿಷ್ಠ 2,500 ಮೆಗಾ ವ್ಯಾಟ್ ನಷ್ಟು ಸಾಮರ್ಥ್ಯದ ಸೌರ ಘಟಕಗಳನ್ನು ಕುಸುಮ್-ಸಿ (ಫೀಡರ್ ಲೆವೆಲ್ ಸೋಲಾರೈಸೇಶನ್ ಅಗ್ರಿಕಲ್ಚರಲ್ ಪಂಪ್‌ಸೆಟ್) ಯೋಜನೆಯಡಿ ಹಾಗೂ ಕುಸುಮ್-ಬಿ (ಆಫ್ ಗ್ರಿಡ್) ಯೋಜನೆಯಡಿ 2. 50 ಲಕ್ಷ ಪಂಪ್‌ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇವಲ್ಲದೆ ರಾಜ್ಯದಲ್ಲಿ ಹಲವಾರು RE/ಸೋಲಾರ್ ಪಾರ್ಕ್‌ಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

**ಕೆ. ಪಿ. ರುದ್ರಪ್ಪಯ್ಯ**
ವ್ಯವಸ್ಥಾಪಕ ನಿರ್ದೇಶಕರು, ಕ್ರೆಡೆಲ್, ಬೆಂಗಳೂರು



**ನಮ್ಮ ದೇಶದಲ್ಲಿ ಸೌರ ಇಂಧನ ತಂತ್ರಜ್ಞಾನ ಕುರಿತ ಬೆಳವಣಿಗೆಗಳು ಮತ್ತು ಅದರ ಅನಿವಾರ್ಯತೆ ಹಾಗೂ ಪರಿಣಾಮಕಾರಿ ಬಳಕೆಯ ಬಗ್ಗೆ ಹೇಳಬಹುದಾ?**

ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸೌರಶಕ್ತಿಯನ್ನೊಳಗೊಂಡು ನವೀಕರಿಸಬಹುದಾದ ಇಂಧನ ಯೋಜನೆಗಳ ಕ್ಷೇತ್ರದಲ್ಲಿ ಹಲವಾರು ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಸೋಲಾರ್ ಎನರ್ಜಿ (ಎನ್‌ಐಎಸ್‌ಇ), ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ಮೂಲಕ ಸಂಶೋಧನೆಗಳನ್ನು ಮಾಡುತ್ತಿದ್ದು, ಕ್ರಾಂತಿಕಾರಕ ಬದಲಾವಣೆಗಳನ್ನು ತರುತ್ತಿದೆ. ಇದರಿಂದ ಸೌರಫಲಕಗಳು ಮತ್ತು ಅವುಗಳಿಗೆ ಸಂಬಂಧಿಸಿದ ಉಪಕರಣಗಳ ದಕ್ಷತೆ, ಹೊಸ ಆವಿಷ್ಕಾರವಾದ ದ್ವಿಮುಖ ಸೌರಫಲಕಗಳ ಅಳವಡಿಕೆಯಿಂದಾಗಿ ದಕ್ಷತೆಯಲ್ಲಿ ಏರಿಕೆ ಜೊತೆಗೆ ಅವುಗಳ ವೆಚ್ಚವೂ ಕಡಿಮೆಯಾಗುತ್ತಿದೆ ಹಾಗೂ ಇದಲ್ಲದೆ ಸೌರ ಘಟಕಗಳನ್ನು ಅಳವಡಿಸಲು ಅವಶ್ಯವಿರುವ ಸ್ಥಳವು ಕಾಲು ಭಾಗಕ್ಕಿಂತ ಕಡಿಮೆಯಾಗಿದೆ. ಸೋಲಾರ್ ಸೆಲ್ ಮ್ಯಾನುಫ್ಯಾಕ್ಚರಿಂಗ್ ಘಟಕಗಳನ್ನು ದೇಶದ ನಾನಾ ಭಾಗಗಳಲ್ಲಿಯೇ (ಮೇಕ್ ಇನ್ ಇಂಡಿಯ ಪ್ರೋಗ್ರಾಮ್) ಸ್ಥಾಪನೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಸೌರ ಘಟಕಗಳನ್ನು ಜಲ ಮೂಲಗಳ ಮೇಲ್ಭಾಗದಲ್ಲಿ (ಫ್ಲೋಟಿಂಗ್ ಸೋಲಾರ್) ಅಳವಡಿಸುವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಇನ್ನೂ ಹೆಚ್ಚಿನ ಆವಿಷ್ಕಾರ ಈ ಕ್ಷೇತ್ರದಲ್ಲಿ ನಡೆಯುತ್ತಿದೆ. ಸದರಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಅಳವಡಿಸುವ ಹಿನ್ನೆಲೆಯಲ್ಲಿ ಬಹಳಷ್ಟು ಮಟ್ಟದಲ್ಲಿ ಇವುಗಳ ಉಪಯೋಗದ ಕುರಿತಂತೆ ಸಾರ್ವಜನಿಕರಲ್ಲಿ ಅರಿವು ಮತ್ತು ಪ್ರಚಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಪರಿಣಾಮಕಾರಿ ಅನುಷ್ಠಾನಕ್ಕಾಗಿ ಈ ಕ್ಷೇತ್ರದಲ್ಲಿ ಐಟಿಐ ಮತ್ತು ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಸ್ಕಿಲ್ ಡೆವಲಪ್‌ಮೆಂಟ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದಲ್ಲದೆ ಪಠ್ಯಪುಸ್ತಕಗಳಲ್ಲಿಯೂ ಸಹ ಈ ವಿಷಯವನ್ನು ಪರಿಚಯಿಸಲಾಗುತ್ತಿದೆ. ಸೌರಶಕ್ತಿ ಆಧಾರಿತ ಘಟಕಗಳನ್ನು ಉತ್ತೇಜಿಸಲು ಸರಕಾರವು ಕೆಳಕಂಡ ರಿಯಾಯಿತಿಗಳನ್ನು ಘೋಷಿಸಿದೆ.

**1. ಪ್ರಸರಣ ಶುಲ್ಕ ಪಾವತಿಯಲ್ಲಿ ಮನ್ನಾ**

**2. ಪ್ರಸರಣ ಹಾಗೂ ವಿತರಣ ಜಾಲದಲ್ಲಿ ಮುಕ್ತ ಪ್ರವೇಶ (ಜಿಇಒಎ)**

**3. ಕಾರ್ಬನ್ ಕ್ರೆಡಿಟ್‌ನ ಪ್ರಯೋಜನಗಳು**

**ಸೌರ ಇಂಧನ ಬಳಕೆಯಿಂದ ಆಗುವ ಪ್ರಯೋಜನಗಳು ಮತ್ತು ಬಳಸದಿದ್ದರೆ ಆಗಬಹುದಾದ ಪರಿಣಾಮಗಳೇನು?**

**ಬಳಕೆಯಿಂದ ಪ್ರಯೋಜನಗಳೆಂದರೆ...**ರೈತರು ಹಗಲಿನಲ್ಲಿ ಯಥೇಚ್ಛವಾಗಿ ಉಚಿತವಾಗಿ ದೊರಕುವ ಸೌರಶಕ್ತಿಯನ್ನು ಕೃಷಿ ಚಟುವಟಿಕೆಗಳಿಗೆ ಬಳಸಿಕೊಂಡು ಹೆಚ್ಚು ಇಳುವರಿಯನ್ನು ಪಡೆಯಬಹುದಾಗಿದೆ. ಇದಲ್ಲದೆ, ಕೈಗಾರಿಕೆಗಳು, ಶಾಲಾ-ಕಾಲೇಜುಗಳು, ಆಸ್ಪತ್ರೆಗಳು ಅವಶ್ಯಕವಿರುವ ವಿದ್ಯುತ್ ಗಾಗಿ ವಿದ್ಯುತ್ ಸರಬರಾಜು ಕಂಪೆನಿಗಳ ಮೇಲೆ ಅವಲಂಬಿತರಾಗದೆ ಸೌರಶಕ್ತಿಯ ಘಟಕಗಳನ್ನು ಅಳವಡಿಸುವ ಮೂಲಕ ಕಡಿಮೆ ದರದಲ್ಲಿ ವಿದ್ಯುತ್ತನ್ನು ಪಡೆಯಬಹುದಾಗಿದೆ ಹಾಗೂ ಈ ಮೂಲಕ ಪ್ರತಿ ಜನ ಸಾಮಾನ್ಯರೂ ನಿಸರ್ಗ/ಪರಿಸರವನ್ನು ರಕ್ಷಿಸುವಲ್ಲಿ ಹಾಗೂ ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆಗೊಳಿಸಿ ಜಾಗತಿಕ ತಾಪಮಾನ ಹಾಗೂ ಹವಾಮಾನದಲ್ಲಾಗುವ ವ್ಯತಿರಿಕ್ತ ಪರಿಣಾಮವನ್ನು ತಡೆಯಬಹುದಾಗಿದೆ. ಯಥೇಚ್ಛವಾಗಿ ಉಚಿತವಾಗಿ ಲಭ್ಯವಿರುವ ಸೌರಶಕ್ತಿಯನ್ನು ಬಳಸದೇ ಇದ್ದ ಪಕ್ಷದಲ್ಲಿ ಪರ್ಯಾಯ ಇಂಧನ ಮೂಲಗಳಾದ ಕಲ್ಲಿದ್ದಲು, ಡೀಸೆಲ್, ಗ್ಯಾಸ್ ಮೊದಲಾದವನ್ನು ಉಪಯೋಗಿಸಿದಲ್ಲಿ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ.

**ಕರ್ನಾಟಕ ರಾಜ್ಯದ ಮಟ್ಟಿಗೆ ಸಾಮಾನ್ಯವಾಗಿ ಸೌರ ಇಂಧನವನ್ನು ಯಾವ್ಯಾವ ಕ್ಷೇತ್ರಗಳಲ್ಲಿ ಹೆಚ್ಚಾಗಿ ಬಳಸಿಕೊಳ್ಳಬಹುದು?**

ಕರ್ನಾಟಕ ಸರ್ಕಾರವು ಸೌರ ವಿದ್ಯುತ್ ಯೋಜನೆಗಳಿಗೆ ಒತ್ತು ನೀಡುವ ನಿಟ್ಟಿನಲ್ಲಿ ದೇಶದಲ್ಲಿಯೇ ಮೊದಲ ಬಾರಿಗೆ ಪ್ರತ್ಯೇಕ ಸೌರ ನೀತಿಯನ್ನು ಜಾರಿಗೆ ತಂದಿದ್ದು, ಸದರಿ ನೀತಿಯಲ್ಲಿ ವಿದ್ಯುತ್ ಖರೀದಿ ಒಪ್ಪಂದ ವರ್ಗವನ್ನು ಒಳಗೊಂಡು ಸ್ವಯಂ ಬಳಕೆ, ಸಮೂಹ ಸ್ವಯಂ ಬಳಕೆ ಮತ್ತು ಮೂರನೆಯ ವ್ಯಕ್ತಿ ಮಾರಾಟ ವರ್ಗದಡಿ, ಸೋಲಾರ್ ರೂಫ್ ಟಾಪ್, ಸೋಲಾರ್ ಪಂಪ್ ಯೋಜನೆಗಳಡಿ ಸೌರ ಯೋಜನೆಗಳ ಸೋಲಾರ್ ಪಾರ್ಕ್ ಹಂಚಿಕೆಗಾಗಿ ಅವಕಾಶ ಕಲ್ಪಿಸಿತು. ಈಗಾಗಲೇ 14,025 ಮೆ. ವ್ಯಾ.ನಷ್ಟು ಸೌರ ಘಟಕಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ ಸೋಲಾರ್ ರೂಫ್ ಟಾಪ್ ಯೋಜನೆಯನ್ನು ಒಳಗೊಂಡು 8,424 ಮೆ. ವ್ಯಾ. ನಷ್ಟು ಸಾಮರ್ಥ್ಯದ ಸೌರ ಯೋಜನೆಗಳು ಅನುಷ್ಠಾನಗೊಂಡಿವೆ. ವಿದ್ಯುಚ್ಛಕ್ತಿ ಅವಲಂಬಿತ ಕ್ಷೇತ್ರಗಳಾದ ಕೃಷಿ ಚಟುವಟಿಕೆಗಳಿಗಾಗಿ, ಮನೆಗಳು, ಕೈಗಾರಿಕೆಗಳು, ಶಾಲಾ-ಕಾಲೇಜುಗಳು, ಆಸ್ಪತ್ರೆಗಳು ಹಾಗೂ ವಿವಿಧ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಸೌರ ಶಕ್ತಿ ಆಧಾರಿತ ವಿದ್ಯುತ್ ಅನ್ನು ಬಳಸಿಕೊಳ್ಳಲಾಗುತ್ತಿದೆ.

**ಸೌರ ಇಂಧನ ಬಳಕೆ ಹೆಚ್ಚಿಸಲು ದೇಶ ಮತ್ತು ರಾಜ್ಯದ ಮಟ್ಟದಲ್ಲಿ ನೀತಿಯ ನಿರೂಪಣೆಯಲ್ಲಿ ಆಗಬೇಕಾದ ಬದಲಾವಣೆಗಳೇನು?**

ಸೌರ ಇಂಧನ ಬಳಕೆ ಹೆಚ್ಚಿಸಲು ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸರಳವಾದ ನೀತಿಗಳನ್ನು ಜಾರಿಗೆ ತರಲಾಗಿದೆ ಮತ್ತು ಸಹಾಯಧನವನ್ನು ಸಹ ನೀಡಲಾಗುತ್ತಿದೆ. ಸಾರ್ವಜನಿಕರಲ್ಲಿ ಸೌರ ಇಂಧನದ ಬಳಕೆಯ ಕುರಿತಂತೆ ಇನ್ನೂ ಹೆಚ್ಚಿನ ಮಟ್ಟದ ಪ್ರಚಾರವನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದರಿಂದ ಸೌರ ಇಂಧನದ ಮೂಲಕ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಲು ಅನುಕೂಲಕರವಾಗಿದೆ. ಹೊಸ ಆವಿಷ್ಕಾರಕ್ಕೆ ಅನುಗುಣವಾಗಿ ದೊರಕುವ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳಲು ಕಾಲಕಾಲಕ್ಕೆ ನೀತಿಯಲ್ಲಿ ಬದಲಾವಣೆ ತರಲಾಗುತ್ತಿದೆ.


**ಸೌರ ಇಂಧನ ಬಳಕೆ ಹೆಚ್ಚಳಕ್ಕೆ ಪೂರಕವಾಗಿರುವ ಸಂಪನ್ಮೂಲಗಳು ಮತ್ತು ಅಭಿವೃದ್ಧಿ ಪಡಿಸಿರುವ ತಂತ್ರಜ್ಞಾನದ ಕುರಿತು...**

ರಾಜ್ಯದ ಬಹುತೇಕ ಜಿಲ್ಲೆಗಳು ಸೌರಶಕ್ತಿ ಆಧಾರಿತ ಇಂಧನ ಮೂಲದಿಂದ ವಿದ್ಯುತ್ ಉತ್ಪಾದಿಸಲು ಅನುಕೂಲಕರವಾಗಿವೆ. ಸೌರತಂತ್ರಜ್ಞಾನದಲ್ಲಿ ದಿನೇ ದಿನೇ ಸಂಶೋಧನೆಗಳು ಹೆಚ್ಚಾಗುತ್ತಿದ್ದು ಸೋಲಾರ್ ಸೆಲ್ ಪ್ಯಾನೆಲ್‌ಗಳ ಕ್ಷಮತೆ ಹೆಚ್ಚಾಗಿದ್ದು ಕಡಿಮೆ ಸ್ಥಳದಲ್ಲಿ ಹೆಚ್ಚಿನ ವಿದ್ಯುತ್ ಉತ್ಪಾದಿಸಬಹುದಾಗಿದೆ. ಸೌರ ಘಟಕಗಳೊಂದಿಗೆ ಪವನ ವಿದ್ಯುತ್ ಘಟಕಗಳನ್ನು ಪೂರಕವಾಗಿ ಅನುಷ್ಠಾನಗೊಳಿಸಿ ವಿದ್ಯುತ್ ಉತ್ಪಾದಿಸಿದಲ್ಲಿ ರವಾನಿಸುವ ಉಪಕೇಂದ್ರಗಳ ದಕ್ಷ ಉಪಯುಕ್ತತೆಯಾಗುತ್ತದೆ. ಸೋಲಾರ್ ಸೆಲ್ ಉತ್ಪಾದನೆ ಹಾಗೂ ಸೌರಶಕ್ತಿಯಿಂದ ಉತ್ಪಾದಿಸಿದ ವಿದ್ಯುತ್ ಅನ್ನು ಶೇಖರಿಸಿ ಬೇಡಿಕೆಯ ಸಮಯದಲ್ಲಿ ಸ್ವಯಂ ಬಳಕೆಗಾಗಿ ಅಥವಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸರಬರಾಜು ಮಾಡುವ ತಂತ್ರಜ್ಞಾನವು ಸದ್ಯಕ್ಕೆ ದುಬಾರಿಯಾಗಿದೆ. ಈ ತಂತ್ರಜ್ಞಾನದಲ್ಲಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಸಂಶೋಧನೆ ಆಗಬೇಕಿದೆ.

**ಒಟ್ಟಾರೆ ಸಮಾಜದ ಅಭಿವೃದ್ಧಿ ನೋಡುವಾಗ, ಕ್ರೆಡಲ್‌ನಿಂದ ಮಾಡಬಹುದಾದ ಆದ್ಯತೆಯ ಕೆಲಸಗಳಾವುವು? ನಿಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಸೌರಶಕ್ತಿಯ ಪರಿಣಾಮಕಾರಿ ಬಳಕೆ ಮತ್ತು ಉತ್ತೇಜನಕ್ಕಾಗಿ ಯಾವ ಯಾವ ಸಾಧ್ಯತೆಗಳನ್ನು ಗುರುತಿಸಿದ್ದೀರಿ?**

ಕ್ರೆಡಲ್ ಸಂಸ್ಥೆಯು, ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಅಡಿಯಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳಿಗೆ ಉತ್ತೇಜನ ನೀಡುವ ನೋಡಲ್ ಏಜೆನ್ಸಿ ಆಗಿರುತ್ತದೆ. ರಾಜ್ಯ ಸರ್ಕಾರದಿಂದ ನವೀಕರಿಸಬಹುದಾದ ಇಂಧನ ನೀತಿ 2022-27ನ್ನು ಜಾರಿಗೆ ತಂದಿದ್ದು, ಸದರಿ ನೀತಿಯ ಅವಧಿಯಲ್ಲಿ ಕನಿಷ್ಠ 10 ಗಿಗಾ ವ್ಯಾಟ್ ಸಾಮರ್ಥ್ಯದಷ್ಟು ಘಟಕಗಳನ್ನು ಸೌರಶಕ್ತಿಯನ್ನು ಒಳಗೊಂಡು ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಹೊಂದಿದೆ. ಇದರ ಭಾಗವಾಗಿ ಆದ್ಯತೆಯ ಮೇರೆಗೆ ಕೃಷಿ ಪಂಪ್‌ಸೆಟ್‌ಗಳ, ಕೈಗಾರಿಕೆ, ಗೃಹ ಬಳಕೆ ಮತ್ತು ನೀರಾವರಿ ಯೋಜನೆಗಳ ವಿದ್ಯುತ್ ಪೂರೈಕೆಗಾಗಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸೌರಶಕ್ತಿಯನ್ನು ಬಳಸಲು ಕುಸುಮ-ಬಿ, ಕುಸುಮ-ಸಿ, ಸೋಲಾರ್ ರೂಫ್‌ಟಾಪ್ ಸೋಲಾರ್ ಪಾರ್ಕ್‌ನಂತಹ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಕ್ರೆಡಲ್ ವತಿಯಿಂದ ಈಗಾಗಲೇ ಸೌರಶಕ್ತಿಯನ್ನೊಳಗೊಂಡು ಇನ್ನಿತರ ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದನ್ನು ಪರಿಣಾಮಕಾರಿಯಾಗಿ ತರುವ ನಿಟ್ಟಿನಲ್ಲಿ ಜನ ಸಾಮಾನ್ಯರಿಗೆ ಸಂದೇಶ ರವಾನಿಸುವ ಕಾರ್ಯವನ್ನು ಆದ್ಯತೆಯ ಮೇರೆಗೆ ಕೈಗೊಳ್ಳಲಾಗುತ್ತಿದೆ.



# ನವನವೀನ ಶೋಧನೆಯ ಹೆಜ್ಜೆಗಳಲ್ಲಿ ನಾರಿಯರ ಗೆಜ್ಜೆನಾದ

ಮಾತೃಶ್ರೀ ಹೇಮಾವತಿ ಹೆಗ್ಗಡೆ



ಸಮೃದ್ಧಿ-ಸಂತೃಪ್ತಿ ಸಮಾವೇಶದಲ್ಲಿ ಪ್ರದರ್ಶನಕ್ಕೆ ಇಟ್ಟಿರುವ ಅನೇಕ ಮಳಿಗೆಗಳನ್ನು ಗಮನಿಸಿದೆ. ಇಲ್ಲಿ ಮಹಿಳೆಯರು ಕಟ್ಟಿದ ಉದ್ದಿಮೆಗಳನ್ನು ನೋಡಿ ಸಂತೋಷವಾಯಿತು. ನಾನು ಪ್ರವಾಸದಲ್ಲಿರುವಾಗ ಅನೇಕ ಹಿಂದುಳಿದ ದೇಶಗಳಲ್ಲಿ ಗಮನಿಸಿದ ಪ್ರಕಾರ, ಮಾರುಕಟ್ಟೆ,ಕೃಷಿ, ಅಂಗಡಿಗಳಲ್ಲಿ ಮಹಿಳೆಯರೇ ಸೂತ್ರಧಾರರಾಗಿರುತ್ತಾರೆ. ಅನೇಕ ಕೆಲಸಗಳನ್ನು ಮಹಿಳೆಯರೇ ನಿರ್ವಹಿಸುತ್ತಾರೆ. ಥಾಯ್ಲೆಂಡ್‌ನಂಥ ಸಣ್ಣಪುಟ್ಟ ದೇಶಗಳಲ್ಲಿ ನೋಡಿದರೆ ಹೆಚ್ಚಿನ ಕೆಲಸಗಳನ್ನು ಮಹಿಳೆಯರೇ ನಿರ್ವಹಿಸುವುದನ್ನು ನೋಡುತ್ತೇವೆ. ಅವರ ಸಾಮರ್ಥ್ಯ ಅಂತಹುದು.

ಈಗ ನನಗೆ ದೊರೆತ ಮಾಹಿತಿಯ ಪ್ರಕಾರ, ಸುಮಾರು 16 ಸಾವಿರ ಮಹಿಳೆಯರು ಸೌರಶಕ್ತಿಯ ಬಳಕೆ ಮಾಡುತ್ತಿರುವುದು ಮತ್ತು ಇನ್ನಷ್ಟು ಮಹಿಳೆಯರು ಉತ್ಸುಕರಾಗಿರುವುದನ್ನು ನೋಡಿ ಸಂತೋಷವೆನಿಸಿತು. ಸೌರಶಕ್ತಿ ಬಳಸಿ ಮಾಡುವ ವ್ಯಾಪಾರದಲ್ಲಿ ಏಳಿಗೆ ಆಗುತ್ತಾ ಹೋದರೆ, ಪಡೆದ ಸಾಲವನ್ನು ತೀರಿಸುವುದು ಸಾಧ್ಯವಾಗುತ್ತದೆ ಎಂದಾದರೆ ಮಹಿಳೆಯರಿಗೆ ಇದು ನಿಜವಾಗಿಯೂ ಒಂದು ವರ ಆಗಬಲ್ಲದು.



ಯಾವುದೇ ಒಂದು ಯೋಜನೆಯನ್ನು ಆರಂಭಿಸುವಾಗ ಅಥವಾ ದೊಡ್ಡ ಸಾಲ ಗೆದ್ದುಕೊಳ್ಳುವಾಗ ಮನೆಯವರೊಡನೆ ಸಮಾಲೋಚನೆ ಮಾಡಲೇಬೇಕು. ಸಾಲ ಪಡೆದು ಹಣ ತರುವಂತೆ ಪುರುಷರು ಹೇಳಿದರೂ, ಮರುಪಾವತಿ ಮಾಡುವಾಗ ಮಹಿಳೆಯರೇ ಕಷ್ಟ ಪಟ್ಟು ದುಡಿಯಬೇಕಾಗಿರುತ್ತದೆ. ಆದ್ದರಿಂದ ಸಾಲದ ಬಗ್ಗೆ ಮನೆಯ ಎಲ್ಲರಿಗೂ ವಿಷಯ ತಿಳಿದಿರುವುದು ಉತ್ತಮ ಎಂದು ನಾನು ಮಹಿಳೆಯರಿಗೆ ಯಾವಾಗಲೂ ಸಲಹೆ ಮಾಡುತ್ತಲೇ ಇರುತ್ತೇನೆ. ಮಹಿಳೆ ದುಡಿದರೆ ಅದರ ಲಾಭ ಮನೆಮಂದಿಗೇ, ಮಕ್ಕಳಿಗೇ, ಅವರ ವಿದ್ಯಾಭ್ಯಾಸಕ್ಕೆ ವಿನಿಯೋಗವಾಗುತ್ತದೆಯೇ ಹೊರತು ಇತರರಿಗೆ ಖರ್ಚಾಗುವುದಿಲ್ಲ.

ಇನ್ನೊಂದು ಗಮನಿಸಬೇಕಾದ ವಿಷಯವೆಂದರೆ, ನಮ್ಮ ನಡುವೆ ಮಹಿಳಾ ಸಂಘಗಳೇ ಹೆಚ್ಚಿವೆ ಮತ್ತು ಅವು ಸಕ್ರಿಯವಾಗಿವೆ. ಪುರುಷರ ಸಂಘಗಳು ಅತ್ಯಂತ ಕಡಿಮೆಯಿವೆ. ಮಹಿಳೆಯರಿಗೆ ಸೌವಲತ್ತುಗಳನ್ನು ಕೊಡುವುದರಿಂದ, ಅವರು ಸಾಮಾಜಿಕವಾಗಿ ಮುಂದೆ ಬರುವುದು ಸಾಧ್ಯವಾಗಿದೆ ಎನಿಸುತ್ತದೆ. ಸಿಡ್ಬಿ ಸಂಸ್ಥೆಯವರು ಬಹಳಷ್ಟು ಅರ್ಹ ಮಹಿಳೆಯರಿಗೆ ಸಾಲ ಕೊಟ್ಟು ಅನುಕೂಲ ಕಲ್ಪಿಸಿದ್ದಾರೆ. ಸ್ವ ಉದ್ಯೋಗದಿಂದ ಅವರಿಗೆ ಆರ್ಥಿಕ ಲಾಭ ದೊರೆಯುತ್ತದೆ ಅಲ್ಲದೆ, ವ್ಯವಹಾರ ಹೇಗೆ ಮಾಡುವುದು ಎಂದು ತಿಳಿದುಕೊಳ್ಳಲು ಅವಕಾಶ ವಾಗುತ್ತದೆ. ಮಹಿಳೆಯ ಕೈಯಲ್ಲಿ ಹಣ ಓಡಾಡಿದಾಗ ಮನೆಯಲ್ಲಿಯೂ ಗೌರವ, ಸಮಾಜದಲ್ಲಿಯೂ ಗೌರವ, ಗಂಡನ ದೃಷ್ಟಿಯಲ್ಲಿಯೂ ಗೌರವ ದೊರೆಯುತ್ತದೆ.

ಒಮ್ಮೆ ಕುಬ್ಜ ಮಹಿಳೆಯೊಬ್ಬಳು ತನ್ನ ಅನುಭವ ಹಂಚಿಕೊಂಡಿದ್ದ ಸಂದರ್ಭ ನನಗೆ ನೆನಪಾಗುತ್ತದೆ. ಅವಳನ್ನು ಅಪ್ಪ ಅಮ್ಮ ಸಾಕುತ್ತಿದ್ದರು. 'ನಮ್ಮ ಬಳಿಕ ಮುಂದೆ ನಿನ್ನ ಜೀವನ ಹೇಗೋ ಏನೋ' ಎಂದು ಹೆತ್ತವರು ವ್ಯಾಕುಲರಾಗುತ್ತಿದ್ದರು. ಅಣ್ಣಂದಿರೋ, 'ಈ ತಂಗಿ ನಮಗೊಬ್ಬಳು ಭಾರ, ಇವಳಿಗೆ ಮದುವೆಯೂ ಆಗುವ ಹಾಗಿಲ್ಲ' ಎಂದು ತಾತ್ಸಾರದಿಂದ ಇದ್ದರು. ಆದರೆ ಆಕೆ ಎಸ್ ಕೆಡಿಆರ್‌ಪಿ ಸಂಘಕ್ಕೆ ಸೇರಿದ ಬಳಿಕ




ಮೆಣಸಿನ ಪುಡಿ ಮಾಡುವ ಮೆಷಿನ್ ಖರೀದಿಸಿ ಉದ್ಯಮ ಶುರು ಮಾಡಿದ್ದಳು. ನಂತರದ ದಿನಗಳಲ್ಲಿ ಅವಳೇ ಮನೆ ನಡೆಸುವಷ್ಟು ದುಡಿಯುವುದು ಸಾಧ್ಯವಾಯಿತು. ಕುಸಿದು ಹೋಗಿದ್ದ ಅವಳ ಆತ್ಮವಿಶ್ವಾಸಕ್ಕೆ ಬಲವಾದ ಆಧಾರ ಸಿಕ್ಕ ಹಾಗಾಯಿತು. ಹಂಗಿನ ಅನ್ನ ಉಣ್ಣುತ್ತಿದ್ದೇನೆ ಎನ್ನುವ ಭಾವನೆ ಬದಲಾಯಿತು.

ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಎಂದೂ ನಿರುದ್ಯೋಗಿಗಳಾಗಿರಲಿಲ್ಲ. ಅವರು ಸದಾ ಕೆಲಸದಲ್ಲಿ ತೊಡಗಿಸಿಕೊಂಡೇ ಇರುತ್ತಿದ್ದರು. ನಿರುದ್ಯೋಗ ಎನ್ನುವ ಪದ ಸಾಮಾನ್ಯವಾಗಿ ಮಹಿಳೆಯರಿಗೆ ಅನ್ವಯವಾಗುತ್ತಿರಲಿಲ್ಲ. ಅವಳು ನಿರಂತರವಾಗಿ ಮಾಡುವ ಕೆಲಸಕ್ಕೆ ಒಂದು ಮೌಲ್ಯ ಇರಲಿಲ್ಲ. ಆದರೆ ಉದ್ಯೋಗ ಕ್ಷೇತ್ರಕ್ಕೆ ಅವಳು ಇಳಿದಾಗ ಲಾಭ ನಷ್ಟಗಳ ವ್ಯವಹಾರ ಚಾತುರ್ಯವನ್ನು ಪಡೆಯುತ್ತಾಳೆ. ಈ ಚಾತುರ್ಯವನ್ನು ಆಕೆ ಸಿದ್ಧಿಸಿಕೊಳ್ಳಬೇಕು. ಚರಾಚರ ವಸ್ತುಗಳನ್ನು ಎಚ್ಚರಿಸುವ ಸೂರ್ಯನು ಜೀವ ನೀಡುವ ಶಕ್ತಿ. ಅದೇ ರೀತಿಯಲ್ಲಿ ಮನೆಯಲ್ಲಿ ಬೆಳಗುವ ಸೂರ್ಯನೆಂದರೆ ಅದು ಮಹಿಳೆ. ಅವಳು ಎದ್ದರೆ ಮಾತ್ರ ಮನೆ ನಡೆಯುತ್ತದೆ. ಅವಳ ಗೈರುಹಾಜರಿಯಲ್ಲಿಯೇ ಅವಳ ಮಹತ್ವ ಅರ್ಥವಾಗುವುದು.

ರುಡ್‌ಸೆಟ್‌ನಲ್ಲಿ ತರಬೇತಿ ಪಡೆದು 58 ಸಾವಿರ ಜನರು ಬೇರೆ ಬೇರೆ ರೀತಿಯ ಉದ್ಯೋಗ ಮಾಡುತ್ತಿದ್ದಾರೆ. ನಮ್ಮಲ್ಲಿ ಬರುವ ಅನೇಕ ಸಂಘಗಳ ಸದಸ್ಯರಿಗೆ ಒಂದು ಕಿವಿ ಮಾತು ಹೇಳುತ್ತೇನೆ : 'ಹೆಣ್ಣು ಮಕ್ಕಳನ್ನು ಮದುವೆಗಾಗಿ ಬೆಳಸಬೇಡಿ, ಅವರ ಜೀವನಕ್ಕಾಗಿ ಬೆಳೆಸಿ. ಅವಳಿಗೆ ವಿದ್ಯೆ ಮತ್ತು ಉದ್ಯೋಗ ಎಂಬ ಎರಡು ರೆಕ್ಕೆಗಳನ್ನು ಕೊಡಿ' ಎಂದು ಹೇಳುತ್ತೇನೆ. ಮದುವೆಯಾಗಿ ಹೋದ ನಂತರ, ಅಲ್ಲಿನ ಕೌಟುಂಬಿಕ ಪರಿಸರ ಹೇಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಆಗ ಅವಳಿಗೆ ವಿದ್ಯೆ ಮತ್ತು ದುಡಿಮೆಗೆ ಬೇಕಾದ ತಜ್ಞತೆ ಇದ್ದರೆ ಬದುಕಿನ ವಿಶ್ವಾಸ ದೊರೆಯುತ್ತದೆ.

ಇಲ್ಲಿನ ಪ್ರಾತ್ಯಕ್ಷಿಕೆಗಳಲ್ಲಿ ರೊಟ್ಟಿ ಯಂತ್ರ, ಮೊಸರು ಕಡೆಯುವ ಯಂತ್ರ, ಹೊಲಿಗೆ ಯಂತ್ರ ಸೇರಿದಂತೆ ಅನೇಕ ರೀತಿಯ ಯಂತ್ರಗಳನ್ನು ಸೌರಶಕ್ತಿಯಲ್ಲಿ ನಡೆಸುವುದನ್ನು ನೋಡಿ ಖುಷಿಯಾಯಿತು. ಸೆಲ್ಕೋದಿಂದ ಈಗಾಗಲೇ 5,720ಕ್ಕೂ ಅಧಿಕ ಮಂದಿ ಈ ರೀತಿಯ ಸೌಕರ್ಯ ಪಡೆದಿರುವುದನ್ನು ಕೇಳಿದೆ. ಸೌರಶಕ್ತಿಯ ಸಾಧ್ಯತೆಗಳು ಅಪಾರ ಎಂಬುದನ್ನು ಅರಿತಿದ್ದೇನೆ. ವಿದೇಶದಲ್ಲಿ ಎಕರೆಗಟ್ಟಲೆ ಜಾಗದಲ್ಲಿ ಸೋಲಾರ್ ಫಲಕ ಅಳವಡಿಸಿದ್ದನ್ನು ನೋಡಿದ್ದೆ ನಾನು.



ಸಂಸಾರ ಎನ್ನುವುದು ಒಂದು ಸೈಕಲ್ ಬ್ಯಾಲೆನ್ಸ್ ಇದ್ದ ಹಾಗೆ. ಎಷ್ಟೇ ಒಳ್ಳೆಯ ಸೈಕಲ್ ಇದ್ದರೂ ಸಮತೋಲನದ ಅರಿವು ಇಲ್ಲದೇ ಇದ್ದರೆ ಮುಂದೆ ಹೋಗುವುದು ಸಾಧ್ಯವಿಲ್ಲ. ಮಹಿಳೆಯರು ಈ ಸಮತೋಲನದ ಕಲೆಯನ್ನು ಬಾಲ್ಯದಿಂದಲೇ ಕಲಿತುಕೊಳ್ಳುತ್ತಾರೆ. ಉದ್ಯೋಗ ಮತ್ತು ಸಂಸಾರವನ್ನು ತೂಗಿಸುವ ಅವರ ಕೌಶಲವನ್ನು ಶ್ಲಾಘಿಸಲೇಬೇಕು.

ಬಾಲ್ಯ ಮತ್ತು ವೃದ್ಧಾಪ್ಯ ಎರಡೂ ಪರಾವಲಂಬಿ. ಈ ಎರಡೂ ಸ್ಥಿತಿಗಳಲ್ಲಿ ನಮಗೆ ಯಾರದ್ದಾದರೂ ಸಹಾಯ ಬೇಕಾಗುತ್ತದೆ. ಯೌವ್ವನದಲ್ಲಿ ನಾವು ಸ್ವಾವಲಂಬಿ ಆಗಿರುತ್ತೇವೆ. ಆದ್ದರಿಂದ ಯೌವ್ವನವನ್ನು ಜಾಣ್ಮೆಯಿಂದ ನಿರ್ವಹಿಸಿ ನಮ್ಮ ಬ್ಯಾಂಕ್ ಬ್ಯಾಲೆನ್ಸ್ ಮಾಡಿಟ್ಟುಕೊಳ್ಳುವುದು ಮುಖ್ಯ. ಸಾಧ್ಯವಾದಷ್ಟು ಮಟ್ಟಿಗೆ ಇತರರಿಗೆ ಹೊರೆಯಾಗದಂತೆ ಬದುಕುವ ತಯಾರಿ ಮಾಡಿಕೊಳ್ಳಬೇಕು. ಸೆಲ್ಕೋದಂತಹ ಸಂಸ್ಥೆ ಅಂತಹ ಅವಕಾಶಗಳನ್ನು ಮಹಿಳೆಯರಿಗೆ ಒದಗಿಸುತ್ತಿರುವಾಗ ಅವುಗಳ ಸದುಪಯೋಗ ಪಡಿಸಿಕೊಳ್ಳಬೇಕು. ಸೂರ್ಯಶಕ್ತಿ ಖಾಲಿಯಾಗುವಂತಹುದಲ್ಲ. ಬಳಸಿದಷ್ಟು ಉತ್ತಮ. ಸೆಲ್ಕೋದವರ ನೆರವಿನಿಂದ ಹೆಚ್ಚು ಬಳಸಿ ಹೆಚ್ಚು ಲಾಭ ಪಡೆಯುವ ಅವಕಾಶಗಳನ್ನು ಗಮನಿಸಿಕೊಳ್ಳಬಹುದು.

ಸಾಲ ಮರುಪಾವತಿಯಲ್ಲಿ ಎಸ್‌ಕೆಆರ್‌ಡಿಪಿಯ ಸದಸ್ಯರು ಬಹಳ ಬುದ್ಧಿವಂತರು. ಅದರಲ್ಲಿಯೂ ಮಹಿಳೆಯರು ಬಹಳ ಪ್ರಾಮಾಣಿಕವಾಗಿ ಸಾಲ ಮರುಪಾವತಿ ಮಾಡುತ್ತಾರೆ. ಆದ್ದರಿಂದಲೇ ಮಹಿಳೆಯರನ್ನು ಎಲ್ಲರೂ ನಂಬುತ್ತಾರೆ. ಯಾಕೆಂದರೆ ಅವರಿಗೆ ಮತ್ತೆ ಸಾಲ ಪಡೆದು ಬದುಕನ್ನು ಇನ್ನಷ್ಟು ಮುನ್ನಡೆಸಬೇಕೆಂಬ ಛಲ ಇರುತ್ತದೆ. ಹಾಗಾಗಿ ಅವಕಾಶಗಳು ಬಂದಾಗ ಕೈ ಚೆಲ್ಲದೇ ಮುಂದುವರೆಯುವುದು ಮುಖ್ಯ. ಒಮ್ಮೆ ಕಸಬರಿಕೆಯ ಬಗ್ಗೆ ನಾರದ ಮಹರ್ಷಿಗಳಿಗೆ ಬಹಳ ಮರುಕವಾಯಿತಂತೆ. ಇಡೀ ಮನೆ ಸ್ವಚ್ಛವಾಗಿಡುವ ಈ ಕಸಬರಿಕೆ ಮನೆ ಮೂಲೆಯಲ್ಲಿ ಬಿದ್ದಿರುತ್ತದಲ್ಲಾ ಎಂದು ಬೇಸರಿಸಿಕೊಂಡರು. 'ನೀನು ಸ್ವರ್ಗಕ್ಕೆ ಬರುತ್ತೀಯಾ?' ಎಂದು ಅದನ್ನು ಪ್ರಶ್ನಿಸಿದಾಗ ಕಸಬರಿಕೆಗೆ ಖುಷಿಯಾಯಿತು. 'ಬರುತ್ತೇನೆ. ಅಲ್ಲಿಯೂ ಗುಡಿಸಲಿಕ್ಕೆ ಇದೆಯಾ?' ಎಂದು ಪ್ರಶ್ನಿಸಿತಂತೆ. ಎಲ್ಲಿ ಹೋದರೂ ನಮ್ಮ ಯೋಚನೆಗಳನ್ನು ಸೀಮಿತವಾಗಿ ಇಟ್ಟುಕೊಂಡರೆ ಅವಕಾಶಗಳು ಕೈ ತಪ್ಪುತ್ತವೆ. ಮಹಿಳೆಯರೂ ಹೀಗೆಯೇ ತಮಗೆ ಬಂದ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಹೊಸ ಸಾಧ್ಯತೆಗಳನ್ನು ಅನ್ವೇಷಿಸಬೇಕೇ ಹೊರತು, ಸೀಮಿತ ಜಗತ್ತಿನಲ್ಲಿ ಬಂಧಿಯಾಗಿ ಇರಬಾರದು. ಮನುಷ್ಯ ಪ್ರಯತ್ನಕ್ಕೆ ಮಂಜುನಾಥ ಸ್ವಾಮಿಯ ಆಶೀರ್ವಾದ ಇದ್ದೇ ಇರುತ್ತದೆ. ಶ್ರಮವಿದ್ದಲ್ಲಿ ಗೆಲುವು ಇರುತ್ತದೆ.

# ಸ್ವಾವಲಂಬನೆಗೆ ಸೌರ ತಂತ್ರಜ್ಞಾನ ಸಹಕಾರಿ

## -ಡಾ. ಡಿ. ವೀರೇಂದ್ರ ಹೆಗ್ಗಡೆ

ಧರ್ಮಸ್ಥಳ, ಮಾರ್ಚ್ 16: ಅನಾದಿ ಕಾಲದಿಂದ ಸೂರ್ಯನನ್ನು ಪೂಜಿಸಿಕೊಂಡು ಬಂದ ನಮ್ಮ ಪರಂಪರೆಯಲ್ಲಿ, ಇಂದು ಸೂರ್ಯನ ಶಕ್ತಿಯನ್ನು ಅಭಿವೃದ್ಧಿಯಲ್ಲಿ ಬಳಸಿಕೊಳ್ಳಬಹುದಾದ ಅನೇಕ ಸಾಧ್ಯತೆಗಳನ್ನು ಸೌರ ತಂತ್ರಜ್ಞಾನವು ತೆರೆದಿಟ್ಟಿದ್ದು, ಮಹಿಳೆಯರು ಇದರ ಪ್ರಯೋಜನವನ್ನು ಹೆಚ್ಚಾಗಿ ಪಡೆದುಕೊಳ್ಳುವ ಮೂಲಕ ಸ್ವಾವಲಂಬಿಗಳಾಗಬೇಕೆಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರು ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಎಸ್‌ಕೆಡಿಆರ್‌ಡಿಪಿ) ಮತ್ತು ಸೆಲ್ಕೋ ಫೌಂಡೇಷನ್‌ಗಳ, ಜಂಟಿ ಆಶ್ರಯದಲ್ಲಿ ಮಹಿಳಾ ಉದ್ಯಮಿಗಳಿಗಾಗಿ ಹಮ್ಮಿಕೊಂಡಿದ್ದ ಸಮೃದ್ಧಿ-ಸಂತೃಪ್ತಿ, ಸಬಲೀಕರಣ ಎಂಬ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ವಿವಿಧ ರೀತಿಯ ಸೌರಶಕ್ತಿಚಾಲಿತ ಜೀವನೋಪಾಯ ಪರಿಕರಗಳ ಪ್ರಾತ್ಯಕ್ಷಿಕೆಗಳನ್ನು ವೀಕ್ಷಿಸಿದ ನಂತರ ನಡೆದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಭಾರತವೂ ಸೇರಿದಂತೆ ಜಗತ್ತಿನ ವಿವಿಧ ಭಾಗಗಳಲ್ಲಿ ಸೌರಶಕ್ತಿಯ ಅಗತ್ಯ ಮತ್ತು ಅನಿವಾರ್ಯತೆಯನ್ನು ಪಸರಿಸಲು ತಮ್ಮ ಮನಸ್ಸನ್ನು ಇತರ ಕೆಲಸಗಳೆಡೆಗೆ ಚಂಚಲಗೊಳಿಸದೆ ಸೌರಶಕ್ತಿಗಾಗಿ ಮುಡುಪಿಟ್ಟು ಶ್ರದ್ಧೆ ಮತ್ತು ಬದ್ಧತೆಯಿಂದ ದುಡಿಯುತ್ತಿರುವ ಡಾ. ಹರೀಶ ಹಂದೆಯವರು ಇಂದು ಜಾಗತಿಕ ಮಟ್ಟದಲ್ಲಿ ಗುರುತಿಸುವ ವ್ಯಕ್ತಿಯಾಗಿ ಬೆಳೆದಿದ್ದಾರೆ ಎಂದು ಶ್ಲಾಘಿಸಿದರು.

ಇಂದು ವಾಹನಗಳನ್ನೂ ಕೂಡ ಸೌರಶಕ್ತಿಯಿಂದ ಓಡಿಸಬಹುದಾದ ತಂತ್ರಜ್ಞಾನ ಬಂದಿದೆ, ಇದರ ಜೊತೆಗೆ ಸೌರತಂತ್ರಜ್ಞಾನವು ಎಲ್ಲೆಡೆ ಅಡುಗೆ ಮಾಡಲೂ ಸಹ ದೊರೆತರೆ ಅದು ವ್ಯಾಪಕ ಬದಲಾವಣೆಗೆ ಕಾರಣವಾಗಲಿದೆ ಎಂದರು. ಬಹಳ ಹಿಂದೆ, ಗುಡಿಸಲಲ್ಲಿದ್ದ ಮಹಿಳೆಗೆ ಅಡುಗೆಗಾಗಿ ಸೌರಶಕ್ತಿ ಮತ್ತು ಹಸಿರು ಇಂಧನ ಘಟಕದ ವ್ಯವಸ್ಥೆಯನ್ನು ಕಲ್ಪಿಸಿದ್ದಕ್ಕಾಗಿ 2012ರಲ್ಲಿ ಜಾಗತಿಕ ಮಟ್ಟದ ಆಸ್ಡೆನ್ ಪ್ರಶಸ್ತಿಯು ಶ್ರೀಕ್ಷೇತ್ರಕ್ಕೆ ಸಂದಿದ್ದನ್ನು ಡಾ. ಹೆಗ್ಗಡೆಯವರು ಇದೇ ಸಂದರ್ಭದಲ್ಲಿ ಸ್ಮರಿಸಿಕೊಂಡರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಎಸ್‌ಕೆಆರ್‌ಡಿಪಿಯ ಜ್ಞಾನವಿಕಾಸ ಕಾರ್ಯಕ್ರಮದ ಅಧ್ಯಕ್ಷರಾದ ಡಾ. ಹೇಮಾವತಿ ವಿ. ಹೆಗ್ಗಡೆ ಅವರು ಮಾತನಾಡಿ, ಸೌರ ತಂತ್ರಜ್ಞಾನವನ್ನು ಅಗತ್ಯವಿರುವವರಿಗೆ ತಲುಪಿಸುವಲ್ಲಿ ಸೆಲ್ಕೋ ಸಂಸ್ಥೆಯು ಮಾಡುತ್ತಿರುವ ಕೆಲಸ ಅನನ್ಯವಾದುದು. ಇಂತಹ ಅವಕಾಶವನ್ನು ಮಹಿಳೆಯರು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮೂಲಕ ಸ್ವಾವಲಂಬಿಗಳಾಗಬೇಕೆಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿದ್ದ ಸೆಲ್ಕೋ ಫೌಂಡೇಷನ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಡಾ. ಹರೀಶ್ ಹಂದೆ ಅವರು ಮಾತನಾಡಿ, ಸೆಲ್ಕೋದ ಪ್ರಯತ್ನದಿಂದ ಈವರೆಗೆ ಜಾಗತಿಕವಾಗಿ ಸುಮಾರು ಒಂದು ಕೋಟಿ ಜನರು ವಿವಿಧ ರೀತಿಯ ಸೌರಶಕ್ತಿಯ ಪ್ರಯೋಜನಗಳನ್ನು ಪಡೆದಿದ್ದಾರೆ. 2028ರ ಹೊತ್ತಿಗೆ ಇದೇ ರೀತಿಯಲ್ಲಿ ಆಫ್ರಿಕಾ ಮತ್ತು ಏಷ್ಯಾದ ದಕ್ಷಿಣ-ಪೂರ್ವ ದೇಶಗಳ ಒಂದು ಲಕ್ಷ ಮಹಿಳೆಯರೂ ಸೇರಿದಂತೆ ಜಾಗತಿಕ ಮಟ್ಟದಲ್ಲಿ ಒಂದು ಕೋಟಿ ಜನರಿಗೆ ಜೀವನೋಪಾಯ ಕ್ಷೇತ್ರದಲ್ಲಿ ಸೌರಶಕ್ತಿಯ ಪ್ರಯೋಜನಗಳನ್ನು ತಲುಪಿಸುವ ಗುರಿ ಹೊಂದಲಾಗಿದೆ ಎಂದರು. ಸುಮಾರು 25 ವರ್ಷಗಳ ಹಿಂದೆ ಆರಂಭವಾದ ಸೆಲ್ಕೋ ಸಂಸ್ಥೆ ಮತ್ತು ಎಸ್‌ಕೆಆರ್‌ಡಿಪಿಯ ಸಹಯೋಗವನ್ನು ಇದೇ ಸಂದರ್ಭದಲ್ಲಿ ಡಾ. ಹಂದೆಯವರು ಸ್ಮರಿಸಿಕೊಂಡರು.




ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸವಿತಾ ಸುಳುಗೋಡು ಮಾತನಾಡಿ,

ಸೌರಶಕ್ತಿಚಾಲಿತ ತಂಪುಕಾರಕ (ಫ್ರಿಡ್ಜ್)ವು ಜೀವ ಉಳಿಸುವ ಲಸಿಕೆಗಳ ಸಂರಕ್ಷಣೆ ಸೇರಿದಂತೆ ಬುಡಕಟ್ಟು ಜನರ ಜೀವನದಲ್ಲಿ ತಂದ ಬದಲಾವಣೆಯ ಬಗ್ಗೆ ವಿವರಿಸಿದರು.



ಬ್ಯಾಂಕ್ ಎಂದರೆ ಅವರು ನಿಯಮ ಪಾಲನೆಯನ್ನು ಮಾಡುವುದು ಅನಿವಾರ್ಯ. ಆದ್ದರಿಂದ ಅರ್ಜಿಗಳನ್ನು ಸ್ವೀಕರಿಸಿದ ಬಳಿಕ ಅವು ನಿಯಮ ಪ್ರಕಾರ ಇವೆಯೇ ಎಂದು ಪರಿಶೀಲಿಸಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಸ್ವಸಹಾಯ ಗುಂಪುಗಳಿಗೆ ಸೇರಿಕೊಂಡಾಗ, ಬ್ಯಾಂಕ್ ಜೊತೆಗೆ ನಡೆಸುವ ವ್ಯವಹಾರಗಳು ನಿಭಾಯಿಸುವುದು ಸುಲಭವಾಗುತ್ತದೆ ಎಂಬ ಆಶಯದಿಂದ ವ್ಯವಸ್ಥೆ ರೂಪಿಸಲಾಗುತ್ತದೆ. ಸಂಘಕ್ಕೆ ಸಾಲ ಸಿಗುವ ವ್ಯವಸ್ಥೆ ಇದ್ದಾಗ ಸದಸ್ಯರಿಗೆ ಹೆಚ್ಚಿನ ಸಮಯ ವ್ಯಯ ಆಗುವುದಿಲ್ಲ. ಇದು ಎಲ್ಲ ಸ್ವಸಹಾಯ ಸಂಘಗಳಿಗೆ ಅನ್ವಯಿಸುತ್ತದೆ. ಒಬ್ಬ ವ್ಯಕ್ತಿಯು ಆರ್ಥಿಕವಾಗಿ ಬಲಿಷ್ಟವಾಗಿದ್ದಾಗ ನೇರವಾಗಿ ಬ್ಯಾಂಕಿನಿಂದ ಸಾಲ ಪಡೆಯಬಹುದು. ಆದರೆ ಇನ್ನೂ ಆರ್ಥಿಕತೆಯ ಮೆಟ್ಟಿಲನ್ನು ಏರುತ್ತಿರುವ ಹೊತ್ತಿನಲ್ಲಿ ಸ್ವಸಹಾಯ ಸಂಘದ ಮೂಲಕ ಸಾಲ ಪಡೆದು, ತಮ್ಮ ಆರ್ಥಿಕತೆಯನ್ನು ಸುಧಾರಿಸಿಕೊಳ್ಳುವುದು ಉತ್ತಮ.

**– ಡಾ. ಎಲ್. ಎಚ್. ಮಂಜುನಾಥ್**

ಗಣ್ಯರನ್ನು ಸ್ವಾಗತಿಸಿ ಪ್ರಸ್ತಾವಿಕ ನುಡಿಗಳನ್ನಾಡಿದ ಸೆಲ್ಕೋ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೋಹನ್ ಭಾಸ್ಕರ್ ಹೆಗಡೆ ಅವರು, ಎಸ್‌ಕೆಆರ್‌ಡಿಪಿ ಸಂಸ್ಥೆಯು ಈಗ ಜಗದಗಲ ಬೆಳೆದು ನಿಂತ ಮಹಾ ಸಂಸ್ಥೆ. ಇಲ್ಲಿ ಕಲಿಯುವುದಕ್ಕೆ ವ್ಯಾಪಕ ಅವಕಾಶ ಇದೆ. ಸಹಾಯ ಮಾಡುವುದಕ್ಕೆ ಹೇರಳ ಅವಕಾಶ ಇದೆ. ಆರ್ತರ ಬದುಕನ್ನು ಹಸನುಗೊಳಿಸಲು ಸಾವಿರಾರು ಸಾಧ್ಯತೆಗಳಿವೆ ಎಂಬ ಮಾತುಗಳ ಮೂಲಕ ಸೆಲ್ಕೋದ ಜೊತೆಗಿನ ಒಡನಾಟವನ್ನು ಹಂಚಿಕೊಂಡರು.



ಕಾರ್ಯಕ್ರಮದಲ್ಲಿ, ಯಶಸ್ವೀ ಮಹಿಳಾ ಉದ್ಯಮಿಗಳಾದ ಧಾರವಾಡದ ರೂಪಾರೆಡ್ಡಿ, ಬೆಳಗಾವಿಯ ಶೈಲಾ ಪ್ರಮೋದಾ ದೇವಿ ತಮ್ಮ ಯಶೋಗಾಥೆಯನ್ನು ಹಂಚಿಕೊಂಡರು. ಎಸ್ ಕೆಆರ್‌ಡಿಪಿಯ ಮುಖ್ಯ ನಿರ್ವಹಣಾಧಿಕಾರಿ ಅನಿಲ್ ಕುಮಾರ್ ಎಸ್. ಎಲ್., ವೇದಿಕೆಯ ಮೇಲಿದ್ದರು.



ನಂತರ ಕಾರ್ಯಕ್ರಮದಲ್ಲಿ, ಗ್ರಾಮೀಣ ಪ್ರದೇಶಗಳ ದೃಷ್ಟಿಯಲ್ಲಿ ಉದ್ಯಮಶೀಲತೆ –ಅವಕಾಶಗಳು ಮತ್ತು ಸವಾಲುಗಳು ಹಾಗೂ ಸುಸ್ಥಿರ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಯಶಸ್ವಿಯಾಗಿ ಉದ್ಯಮವನ್ನು ನಡೆಸುತ್ತಿರುವ ಮಹಿಳಾ ಸಾಧಕರಿಂದ ಅನುಭವಗಳ ಪ್ರಸ್ತುತಿ ಎಂಬ ವಿಷಯಗಳ ಕುರಿತು ವಿಚಾರಗೋಷ್ಠಿಗಳು ನಡೆದವು.

# ಆಸರೆಯಿಲ್ಲದ ಬದುಕಿಗೆ ಸೌರಶಕ್ತಿಯೇ ಹರಿಗೋಲು

ಬೆಂಗಳೂರು ಎಂಬ ಮಹಾನಗರದ ಅಂಚಿನಲ್ಲಿರುವ ಟಿ.ಬೇಗೂರು ಬೆಂಗಳೂರಿನ ಒತ್ತಡವನ್ನೆಲ್ಲ ಆವಾಹಿಸಿಕೊಂಡಿದೆ. ಖರ್ಚುಗಳು ಗಗನಕ್ಕೆ ಏರುತ್ತಿರುವಾಗ ಬದುಕು ಸುರಳೀತವೇನೂ ಅಲ್ಲ. ಪ್ರತೀದಿನದ ಹೋರಾಟಕ್ಕೆ ತಕ್ಕ ಯಶಸ್ಸು ದೊರೆತರೆ ಮಾತ್ರ ಎಲ್ಲವೂ ಸುಗಮ. ಇದು ಮಮತಾ ಮತ್ತು ಸುರೇಶ್ ದಂಪತಿಯ ಅನುಭವವೂ ಹೌದು.

ಕೇವಲ ಎರಡನೇ ಪಿಯುಸಿ ಓದಿರುವ ದಂಪತಿ ಕೂಡು ಕುಟುಂಬದಿಂದ ಬೇರ್ಪಟ್ಟ ನಂತರ, ಯಾವುದೇ ನಿರ್ದಿಷ್ಟ ಕೆಲಸ ಇಲ್ಲದೇ ಬದುಕು ಕಟ್ಟಿಕೊಳ್ಳಲು ಬಹಳ ಕಷ್ಟಪಟ್ಟರು. ಆಗ ಆದಾಯಕ್ಕಾಗಿ ಹಪ್ಪಳ ತಯಾರಿಸುವ ಗೃಹೋದ್ಯಮವನ್ನು ಆರಂಭಿಸಲು ನಿರ್ಧರಿಸಿದರು. ಕಾರಣವಿಷ್ಟೆ. ಮನೆಯಲ್ಲಿ ನಿತ್ಯದ ಬಳಕೆಗಾಗಿ ಹಪ್ಪಳ ಮಾಡುತ್ತಿದ್ದ ಮಮತಾ ಅವರ ಹಪ್ಪಳದ ರುಚಿ ನೋಡಿದ ಸಂಬಂಧಿಕರು, ಹಪ್ಪಳ ತಯಾರಿಸಿ ಏಕೆ ಮಾರಾಟ ಮಾಡಬಾರದು ಎಂಬ ಪ್ರಶ್ನೆ ಎತ್ತಿದರು. ಅರೆ ಹೌದಲ್ಲಾ ಎಂದು ಮಮತಾ ಅವರಿಗೂ ಅನಿಸಿತು. ಮನೆಯವರೂ ಹಪ್ಪಳದ ರುಚಿಯ ಬಗ್ಗೆ ಎರಡು ಮಾತಿಲ್ಲ ಎಂದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಮಮತಾ ಅವರು ತಮ್ಮ ಪತಿ ಸುರೇಶ್ ಅವರ ಬೆಂಬಲದೊಂದಿಗೆ ಹಪ್ಪಳ ತಯಾರಿಕೆಯನ್ನು ಆರಂಭಿಸಿಯೇಬಿಟ್ಟರು.



ಸೌರಶಕ್ತಿ ಚಾಲಿತ ಹಪ್ಪಳ ತಯಾರಿಕಾ ವ್ಯವಸ್ಥೆಯಿಂದ ಈಗ ಯಾರ ಸಹಾಯವೂ ಇಲ್ಲದೆ, ಯಾವಾಗ ಬೇಕಾದರೂ ಹಪ್ಪಳ ತಯಾರಿಸಿಕೊಳ್ಳಬಹುದು. ಕೆಲಸಗಾರರಿಗೆ ಕೊಡಬೇಕಾಗಿದ್ದ ಮಜೂರಿ, ವಿದ್ಯುತ್ ಖರ್ಚು, ಬೆಲೆ ಕಟ್ಟಲಾಗದ ಸಮಯದ ಉಳಿತಾಯವಾಗುತ್ತದೆ. ನಮ್ಮ ಹಪ್ಪಳಗಳು ಸಮೀಪದ ಬೆಂಗಳೂರು, ತುಮಕೂರು, ಹಾಸನ ದೂರದ ಮುಂಬೈ ಹಾಗೂ ಬ್ರೆಜಿಲ್ ಗೂ ಹೋಗಿರುವ ಹೆಮ್ಮೆ ಇದೆ.

**– ಮಮತಾ-ಸುರೇಶ್ ದಂಪತಿ, ಟಿ. ಬೇಗೂರು, ನೆಲಮಂಗಲ ತಾ.**

**ಹಿನ್ನೆಲೆಯನ್ನು ನೋಡುವುದಾದರೆ-**

ಸುಮಾರು ಒಂಬತ್ತು ವರ್ಷಗಳ ಕಾಲ ಕೈಯಿಂದಲೇ ಹಪ್ಪಳ ತಯಾರಿಸುತ್ತಿದ್ದ ದಂಪತಿಗೆ ದಿನದಿಂದ ದಿನಕ್ಕೇ ಹೆಚ್ಚಾಗುತ್ತಲೇ ಇದ್ದ ಬೇಡಿಕೆಯನ್ನು ಪೂರೈಸಲು ಹೆಚ್ಚು ಜನರನ್ನು ಸಹಾಯಕ್ಕಾಗಿ ಅವಲಂಬಿಸಬೇಕಾಯಿತು. ಹಾಗಾಗಿ ಇಬ್ಬರ ಸಹಾಯ ಪಡೆದು ಹಪ್ಪಳ ಮಾಡತೊಡಗಿದರು. ಹೀಗೆ ಒಟ್ಟಾಗಿ, ದಿನಕ್ಕೆ 1500ರಿಂದ 1800 ಹಪ್ಪಳ ತಯಾರಿಸುತ್ತಿದ್ದರು. ವಾರಕ್ಕೆ ಬಂದು 2 ದಿನ ಮಾತ್ರ ಹಪ್ಪಳ ತಯಾರಿಸುತ್ತಿದ್ದರೂ ದಿನಕ್ಕೆ ತಲಾ 500 ರೂಪಾಯಿಯಂತೆ ವೇತನ ನೀಡಬೇಕಿತ್ತು. ಅಷ್ಟೇ ಅಲ್ಲ, ದೊಡ್ಡ ಪ್ರಮಾಣದಲ್ಲಿ ಬೇಡಿಕೆ ಬಂದಾಗ ಅದನ್ನು ಪೂರೈಸಲು ಬೇಕಾದ ಸಿಬ್ಬಂದಿ ಇಲ್ಲದೇ ಮನೆಯವರು ಕಷ್ಟಪಡುತ್ತಿದ್ದರು.

ಇಂತಹ ಸಂದರ್ಭದಲ್ಲಿ ಮಮತಾ ಅವರು ಸೆಲ್ಕೋ ಸಂಪರ್ಕಕ್ಕೆ ಬಂದರು. ತಮ್ಮ ಕೆಲಸವನ್ನು ಕ್ಷಿಪ್ರವಾಗಿ ಮಾಡುವುದಕ್ಕೆ ಪೂರಕವಾಗಿ ಸೌರ ಉಪಕರಣಗಳನ್ನು ಖರೀದಿಸಬೇಕು ಎಂದು ನಿರ್ಧರಿಸಿದರು. ವರ್ಷದ ಹಿಂದೆ, ಎರಡು ಲೈಟ್ ಮತ್ತು ಸೌರಶಕ್ತಿಚಾಲಿತ ಹಪ್ಪಳ ತಯಾರಿಸುವ ಯಂತ್ರದ ವ್ಯವಸ್ಥೆಯನ್ನು ಅಳವಡಿಸಿಕೊಂಡರು. ಸೆಲ್ಕೋ ಸಹಾಯದ ಜೊತೆಗೆ ಇದಕ್ಕಾಗಿ ಬೇಕಾದ ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಎಸ್‌ಕೆಆರ್‌ಡಿಪಿ) ಯ ಮೂಲಕ ಭರಿಸಿಕೊಂಡಿದ್ದಾರೆ. ತಿಂಗಳಿಗೆ ನಾಲ್ಕು ಸಾ. ದಂತೆ ಸಾಲ ಕಟ್ಟಲು ಈಗ ಅವರಿಗೆ ಹೆಚ್ಚು ಕಷ್ಟವಾಗುವುದಿಲ್ಲ. ಆದಾಯವು ಅವರ ಮನಸ್ಸಿನಲ್ಲಿ ಧೈರ್ಯವನ್ನು ತುಂಬಿದೆ.

ಹುರುಳಿಕಾಳು ಮತ್ತು ಅಕ್ಕಿಯನ್ನು ಇತರ ವಿವಿಧ ಪದಾರ್ಥಗಳ ಜೊತೆಗೆ ಸೂಕ್ತ ಪ್ರಮಾಣದಲ್ಲಿ ಬೆರೆಸಿ ಎರಡು ರೀತಿಯಲ್ಲಿ ತಯಾರಿಸುವ ಹಪ್ಪಳಕ್ಕೆ ಬಹಳ ಬೇಡಿಕೆ. ಈ ವಿವಿಧ ಪದಾರ್ಥಗಳ ಪ್ರಮಾಣವನ್ನು ಮಮತಾ ಅವರ ಗಂಡ ಸುರೇಶ್ ಅವರೇ ನಿರ್ಧರಿಸುವುದು ವಿಶೇಷ. ಈ ಹಪ್ಪಳಗಳ ವಿಶೇಷ ಸ್ವಾದವೇ ಯುಎಸ್ಪಿ. ಈ ಸ್ಪೆಷಲ್ ಕೈ ರುಚಿಯನ್ನು ಬಲ್ಲ ಗ್ರಾಹಕರು ಮನೆಗೇ ಬಂದು ಹಪ್ಪಳ ಒಯ್ಯುತ್ತಾರೆ.

ಸೌರಶಕ್ತಿಚಾಲಿತ ವ್ಯವಸ್ಥೆಯನ್ನು ಅಳವಡಿಸಿಕೊಂಡ ನಂತರ ಯಾರ ಸಹಾಯವೂ ಇಲ್ಲದೆ ಪ್ರತಿ ದಿನ 2500 ಹಪ್ಪಳಗಳನ್ನು ನಿರಾಯಾಸವಾಗಿ ತಯಾರಿಸುತ್ತಿದ್ದಾರೆ. ಸುತ್ತಮುತ್ತಲಿನ ಹೊಟೇಲ್, ಡಾಬಾ, ರೆಸ್ಟೋರೆಂಟ್‌ಗಳಲ್ಲದೆ ಶುಭ ಸಮಾರಂಭಗಳಿಗೂ ದಂಪತಿ ಹಪ್ಪಳ ಒದಗಿಸುತ್ತಾರೆ. ಬದುಕು ಭರವಸೆಯ ಅಂಗಳವನ್ನು ಪ್ರವೇಶಿಸಿದೆ.

# ಆಶಾ ದೀಪವಾದ 'ಸೌರ' ಬೆಳಕು

ಯಾರ ದೃಷ್ಟಿ ತಗುಲಿತೋ ಏನೋ, ಇಬ್ಬರು ಪುಟಾಣಿಗಳು ಮತ್ತು ಅಪ್ಪ ಅಮ್ಮ ಇದ್ದ ಆ ಸಂಸಾರದಲ್ಲಿ ಒಂದು ಸಾವು ಸಂಭವಿಸಿತು. ಹಳೇಬೀಡಿನ ಬಳಿಯ ಪುಟ್ಟ ಊರಿನಲ್ಲಿ, ಆ ಸಂಸಾರಕ್ಕೆ ಆಧಾರವಾಗಿದ್ದ ಇಸ್ತ್ರಿ ಅಂಗಡಿಯನ್ನು ಖಾಲಿ ಮಾಡಬೇಕಾಯಿತು. ಈ ಸೋಲಿನ ಕರಿನೆರಳಿನಲ್ಲಿ ಆಶಾ ಕಂಗಾಲಾಗಿದ್ದರು. ದೈನಂದಿನ ಜೀವನ, ಮಕ್ಕಳ ವಿದ್ಯಾಭ್ಯಾಸದ ಹೊರೆಯನ್ನು ಹೊರುವುದು ಸುಲಭವೇನಲ್ಲ, ನಾವಿಕನಿಲ್ಲದ ದೋಣಿಯಂತಾದ ಮೂವರ ಸಂಸಾರ ಬೀದಿಗೆ ಬರುವ ಸಂದರ್ಭ ಸೃಷ್ಟಿಯಾಯಿತು. ಬದುಕಿನ ಅನಿವಾರ್ಯತೆಗಾಗಿ ಕಷ್ಟಪಟ್ಟು ಗಂಡನ ಕಸುಬನ್ನೇ ಮುಂದುವರಿಸಿದರು. ಬಟ್ಟೆಗಳಿಗೆ ಇಸ್ತ್ರಿ ಮಾಡಲು ಕಲಿತುಕೊಂಡರು. ಅಲ್ಲಿಯೂ ಸಂಜೆಗೇ ಅಂಗಡಿ ಮುಚ್ಚಲೇಬೇಕಿತ್ತು. ಅನಿಯಮಿತ ವಿದ್ಯುತ್ ಸರಬರಾಜಿನಿಂದಾಗಿ ಅವರಿಗೆ ಹೆಚ್ಚು ಬಟ್ಟೆಗಳಿಗೆ ಇಸ್ತ್ರಿ ಮಾಡುವುದು ಕಷ್ಟವಾಗಿತ್ತು. ಬೆಳಕಿನ ವ್ಯವಸ್ಥೆಯೂ ಚೆನ್ನಾಗಿರಲಿಲ್ಲ.




**ಸೋಲಾರ್ ಲೈಟ್‌ನಿಂದ ರಾತ್ರಿ ಬಹಳ ಸಮಯದವರೆಗೆ ಐರನ್ ಮಾಡಲು ಸಾಧ್ಯವಾಯಿತು. ಇದರ ಜೊತೆಗೆ ಸೌರಚಾಲಿತ ನೆರಳಚ್ಚು ಯಂತ್ರ ಮತ್ತು ಫ್ರಿಜ್ ಅಳವಡಿಸಿಕೊಂಡಿದ್ದರಿಂದ ಬಹಳ ಅನುಕೂಲವಾಯಿತು. ಈಗ ಆದಾಯ ಐದಾರು ಪಟ್ಟು ಜಾಸ್ತಿಯಾಗಿದೆ. ಮುಂದಿನ ದಿನಗಳಲ್ಲಿ ಜ್ಯೂಸ್ ಮೇಕರ್ ತೆಗೆದುಕೊಳ್ಳುವ ಯೋಚನೆ ಇದೆ. ನಮ್ಮ ಜೀವನದಲ್ಲಿ ಇಷ್ಟೆಲ್ಲ ಬದಲಾವಣೆಯಾಗಲು ದೇವರಂತೆ ಸಹಾಯಕ್ಕೆ ಬಂದಿರುವ ಸೌರಶಕ್ತಿಗೆ ಮತ್ತು ಸೆಲ್ಕೊಗೆ ನಾನು ಚಿರಋಣಿ.**

**–ಆಶಾ ಹಳೇಬೀಡು**

ಇಂತಹ ಸಂದರ್ಭದಲ್ಲಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಎಸ್‌ಕೆಆರ್ ಡಿಪಿ) ಮೂಲಕ ಸುಮಾರು ಆರು ವರ್ಷಗಳ ಹಿಂದೆ ಸೆಲ್ಕೋ ಸಂಪರ್ಕಕ್ಕೆ ಬಂದ ಆಶಾ ಅವರೊಡನೆ ಸೆಲ್ಕೊ ಸಿಬಂದಿ ಸೌರಶಕ್ತಿಯ ಸಾಧ್ಯತೆಗಳನ್ನು ವಿವರಿಸಿದರು.

ಮೊತ್ತಮೊದಲು ಅವರಿಗೆ ಸಂಸ್ಥೆಯಿಂದ ಒಂದು ಸೌರದೀಪದ ಸಂಪರ್ಕ ಕಲ್ಪಿಸಿಕೊಡಲಾಯಿತು. ಇದರಿಂದ ಸಂಜೆ ಬಹು ಹೊತ್ತಿನವರೆಗೂ ಆಶಾ ಅವರು ಕೆಲಸ ಮಾಡುವ ಮೂಲಕ ಆದಾಯ ಸರಿದೂಗಿಸಿಕೊಳ್ಳಲು ಯತ್ನಿಸಿದರು.

ಮುಂದಿನ ದಿನಗಳಲ್ಲಿ ಹೆಚ್ಚಾಗುತ್ತಲೇ ಇದ್ದ ಮಕ್ಕಳ ವಿದ್ಯಾಭ್ಯಾಸದ ಖರ್ಚನ್ನು ಸರಿದೂಗಿಸಿಕೊಳ್ಳಲು ಪ್ರಯತ್ನ ಪಡಬೇಕಿತ್ತು. ಆಶಾ ಅವರು, ಸುಮಾರು 35,000 ರೂ. ಸಾಲದೊಂದಿಗೆ ಒಂದು ಸೌರಚಾಲಿತ ಝೆರಾಕ್ಸ್ ಯಂತ್ರವನ್ನು ಅಳವಡಿಸಿಕೊಂಡರು. ಈ ಹಂತದಲ್ಲಿ ಮತ್ತೊಮ್ಮೆ ಅವರಿಗೆ ಸೆಲ್ಕೊ ನೆರವು ದೊರೆಯಿತು. ಸೋರುತ್ತಿದ್ದ ಹಳೆಯ ಶೆಡ್ ಗೆ ಬದಲಾಗಿ ಹೊಸ ಶೆಡ್ ನಿರ್ಮಿಸಿಕೊಡಲಾಯಿತು. ಈಗ ಅವರು ಇಸ್ತ್ರಿ ಅಂಗಡಿಯನ್ನು ಜನರಲ್ ಸ್ಟೋರ್ ಆಗಿ ಬದಲಾಯಿಸಿದ್ದಾರೆ. ಅಲ್ಲಿ ಲೇಖನ ಸಾಮಗ್ರಿಗಳ ಮಾರಾಟವನ್ನೂ ಆರಂಭಿಸಿದ್ದಾರೆ. ಟೀ, ಕಾಫಿ ಜೊತೆಗೆ ಕಾಂಡಿಮೆಂಟ್ ವಸ್ತುಗಳು ಲಭ್ಯ. ತಂಪು ಪಾನೀಯಗಳನ್ನು ಶೇಖರಿಸಿಡಲು ಸೌರಚಾಲಿತ ತಂಪುಕಾರಕ (ಫ್ರಿಡ್ಜ್) ವನ್ನು ಅಳವಡಿಸಿಕೊಂಡಿದ್ದು ಮುಂದಿನ ದಿನಗಳಲ್ಲಿ ಸೌರಚಾಲಿತ ಜ್ಯೂಸ್ ಮೇಕರ್ ಅಳವಡಿಸಿಕೊಳ್ಳುವ ಯೋಚನೆಯಲ್ಲಿದ್ದಾರೆ.

ಒಂದೊಂದೇ ಹೆಜ್ಜೆಯಿಟ್ಟು ವ್ಯಾಪಾರ ವಿಸ್ತರಿಸಿದ ಆಶಾ ಅವರಿಗೆ ಈಗ ಬದುಕನ್ನು ಎದುರಿಸುವ ಧೈರ್ಯ ಬಂದಿದೆ. ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಬಿಡುವಿನಲ್ಲಿ ಅಮ್ಮನಿಗೆ ಸಹಾಯ ಮಾಡುತ್ತಾರೆ. ಪ್ರೀತಿಯೇ ಅವರ ಆಸ್ತಿ. ಆದಾಯಕ್ಕೆ ಆಧಾರ ಸೌರಶಕ್ತಿ.

# ಇರುಳು ಹಬ್ಬಿದರೇನು..
# ಸ್ವಾವಲಂಬನೆಯ ಬೆಳಕು ಕೈ ಹಿಡಿದಿಲ್ಲವೇನು !

ಸ್ವತಂತ್ರವಾಗಿ ಜೀವನ ನಡೆಸಬೇಕು ಎನ್ನುವ ಆಶಯ ಇರುವವರು ಶ್ರಮಜೀವನ ನಡೆಸಲು ಹಿಂದುಮುಂದು ನೋಡುವುದಿಲ್ಲ. ಹೇಮಲತಾ ಮತ್ತು ಅವರ ಅಕ್ಕ ಕೂಡ ಹಾಗೆಯೇ. ತಾವೇ ದುಡಿದು ಸಂಪಾದನೆ ಮಾಡಬೇಕು ಎಂಬ ಛಲವುಳ್ಳ ಮಹಿಳೆಯರು.

ಯಾಕೆಂದರೆ, ಅವರ ಹೆಗಲ ಮೇಲೆ ಜವಾಬ್ದಾರಿಯ ಹೊರೆ ದೊಡ್ಡದಾಗಿತ್ತು. ನೂರಕ್ಕೆ ನೂರರಷ್ಟು ವಿಶೇಷಚೇತನರಾದ ಹೇಮಲತಾ ಹಾಗೂ ಅವರ ಅಕ್ಕ ಹೊನ್ನಮ್ಮ ಮತ್ತು ಇವರ ತಮ್ಮ ಗಂಗಾಧರ ಹಾಗೂ ಪೋಲಿಯೋಗೆ ತುತ್ತಾಗಿರುವ ಅತ್ತೆ (ತಂದೆಯ ತಂಗಿ)– ಹೀಗೆ ಒಟ್ಟು ಕುಟುಂಬದಲ್ಲಿ ಒಬ್ಬರಿಗೊಬ್ಬರು ಆಸರೆಯಾಗಿ ಬಾಳು ಸಾಗಿಸಬೇಕಾಗಿತ್ತು. ಅಲ್ಲಿ ದುಡ್ಡಿನ ಸಂಪಾದನೆಯ ಜೊತೆ ಸಹಬಾಳ್ವೆ,ತಾಳ್ಮೆಯ ಆಸರೆಯೂ ಬೇಕಾಗಿತ್ತು. ಅಕ್ಕತಂಗಿಯರ ಬಳಿ ತಾಳ್ಮೆಗೆ ಕೊರತೆಯಿರಲಿಲ್ಲವೆನ್ನಿ. ಅಂದಹಾಗೆ, ಈ ಕುಟುಂಬ ವಾಸಿಸುತ್ತಿರುವುದು ದಾವಣಗೆರೆ–ಹರಪನಹಳ್ಳಿ ದಾರಿಯಲ್ಲಿ ಇರುವ ಬಿ. ಚಿತ್ತನಹಳ್ಳಿ ಗ್ರಾಮದಲ್ಲಿ.



***ಸೆಲ್ಕೋ ಸಂಸ್ಥೆಯ ಸಿಬಂದಿಯೇ ರೊಟ್ಟಿ ಮಾಡುವ ತರಬೇತಿ ನೀಡಿದರು. ಇದರ ಜೊತೆಗೆ ಮೊಟ್ಟ ಮೊದಲಿಗೇ 1000 ರೊಟ್ಟಿಗಳ ಆರ್ಡರ್ ನೀಡಿ ಪ್ರೋತ್ಸಾಹ ನೀಡಿದರು. ಸೆಲ್ಕೋದ ಸಹಾಯದಿಂದ ಇವತ್ತು ಉಳಿದ ಎಲ್ಲ ಸಣ್ಣಪುಟ್ಟ ಕೆಲಸಗಳನ್ನು ಬಿಟ್ಟು ರೊಟ್ಟಿ ತಯಾರಿಕೆಯನ್ನು ಮಾತ್ರ ಮಾಡುತ್ತಿದ್ದೇನೆ. ಇದಕ್ಕಾಗಿ ಸೆಲ್ಕೋಗೆ ಋಣಿ.***

ಹದಿಮೂರು ಮಂದಿ ಇರುವ ಕುಟುಂಬದಲ್ಲಿ ಏಳು ಮಕ್ಕಳಿದ್ದಾರೆ. ಅವರಲ್ಲಿ ಈ ಮೂವರೂ ಹುಟ್ಟಿನಿಂದಲೇ ಕೈಕಾಲುಗಳ ವೈಕಲ್ಯ ಹೊಂದಿರುವ ವಿಶೇಷಚೇತನರು. ತಂದೆಯವರ ನಿರಂತರ ಪ್ರೋತ್ಸಾಹದಿಂದ ಹೇಮಲತಾ ಮತ್ತು ಹೊನ್ನಮ್ಮ ಅವರು ಎಸ್ ಎಸ್ಎಲ್ಸಿ ವರೆಗೆ ಓದಿದರು. ಸಹೋದರನೂ ಏಳನೇ ತರಗತಿಯವರೆಗೆ ಶಿಕ್ಷಣ ಪಡೆಯುವುದು ಸಾಧ್ಯವಾಯಿತು. ಅಮ್ಮ ಹತ್ತು ವರ್ಷಗಳ ಹಿಂದೆಯೇ ಇವರನ್ನು ಅಗಲಿದ್ದರಿಂದ ಈ ಹೆಣ್ಮಕ್ಕಳೇ ಅಮ್ಮನ ಪ್ರೀತಿಯನ್ನು ಕುಟುಂಬಕ್ಕೆ ಧಾರೆಯೆರೆಯುತ್ತಿದ್ದರು. ಹೇಮಲತಾರ ಒಬ್ಬ ಅಣ್ಣ ಹಾಗೂ ಇಬ್ಬರು ತಮ್ಮಂದಿರು ತಮ್ಮದೇ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಹೇಮಲತಾಳ ಒಬ್ಬರು ಸೋದರಿ ಮದುವೆಯಾಗಿದ್ದರು. ಹೀಗೆ ಕೌಟುಂಬಿಕ ವಿಚಾರವೇನೆ ಇರಲಿ, ಹೇಮಲತಾ ಮೇಕಪ್ ಮಾಡುವುದು, ತೋರಣದ ಕಲಾಕೃತಿಗಳನ್ನು ಮಾಡುವುದು, ಶಾಲುಗಳನ್ನು ಹೆಣೆಯುವುದು ಮುಂತಾದ ಕುಶಲ ಕೆಲಸ ಮಾಡುತ್ತಿದ್ದರು. ಸೀರೆ–ಕುಪ್ಪಸಗಳಿಗೆ ಕುಂದನ್ ಹಚ್ಚುವುದರಲ್ಲಿಯೂ ಅವರು ಚುರುಕಾಗಿದ್ದರು. ಏಳೆಂಟು ವರ್ಷಗಳಿಂದ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಎಸ್ ಕೆಡಿಆರ್ಡಿಪಿ) ಯ ಸಂಘದ ಸದಸ್ಯೆಯಾಗಿದ್ದುದರಿಂದ ತಮ್ಮಂತೆಯೇ ಜೀವನ ನಿರ್ವಹಿಸುವ ಅನೇಕ ಮಹಿಳೆಯರ ಸಂಪರ್ಕ ಅವರಿಗಿತ್ತು.

ಹೀಗೆ ಅವರಿಗೆ ಸೆಲ್ಕೋ ಸಂಸ್ಥೆಯ ಸಂಪರ್ಕವೂ ಆಯಿತು. ಈ ಕುಶಲ ಕೆಲಸದ ಜೊತೆಗೆ ತಾನು ರೊಟ್ಟಿ ತಯಾರಿ ಕೆಲಸವನ್ನು ಶುರುಹಚ್ಚಿಕೊಳ್ಳಬಹುದಲ್ಲ ಎಂಬ ಆಲೋಚನೆಯೊಂದಿಗೆ ಅವರು ಸೌರಚಾಲಿತ ರೊಟ್ಟಿ ತಯಾರಿಕೆ ಯಂತ್ರವನ್ನು ಅಳವಡಿಸಿಕೊಂಡರು. ಸದಾ ಮಹಿಳೆಯರ ಉದ್ಯೋಗಕ್ಕೆ ಬೆಂಬಲವಾಗಿ ನಿಲ್ಲುವ ಸೆಲ್ಕೋ ಸಂಸ್ಥೆ ಹೇಮಲತಾ ಅವರಿಗೆ ಸಹಾಯ ಮಾಡಿತು. 64 ಸಾವಿರ ರೂ. ಸಾಲ ಪಡೆದು ಈ ಯಂತ್ರ ಖರೀದಿಸಿದರು. ಹೀಗೆ ಅವರು ಹೊಸ ಹೆಜ್ಜೆ ಇರಿಸಿ ಮೂರು ವರ್ಷಗಳಾದವು. ಒಂದೂವರೆ ವರ್ಷದಲ್ಲಿ ಸಾಲ ಚುಕ್ತಾ ಮಾಡಿದ್ದಾರೆ. ಈಗ ರೊಟ್ಟಿಯ ಜೊತೆಗೆ ಬೇಡಿಕೆಯನ್ನು ಆಧರಿಸಿ ಚಪಾತಿಯನ್ನೂ ಮಾಡಿಕೊಡುತ್ತಾರೆ. ಅಕ್ಕ ಹೊನ್ನಮ್ಮನೊಡನೆ ಸೇರಿಕೊಂಡು ನಡೆಸುತ್ತಿರುವ ಈ ಉದ್ಯಮ ಅವರಲ್ಲಿ ಭರವಸೆಯ ಕಿರಣವನ್ನು ಮೂಡಿಸಿದೆ. ಇಡೀ ಕುಟುಂಬಕ್ಕೆ ಬೆಂಬಲವಾಗಿ ನಿಲ್ಲುತ್ತಿರುವ ತೃಪ್ತಿ ಅವರ ಕಂಗಳಲ್ಲಿದೆ.

# ಸಮೃದ್ಧಿ-ಸಂತೃಪ್ತಿ ಎಂಪವರ್ ಹರ್!



**ಗುರುಪ್ರಕಾಶ್ ಶೆಟ್ಟಿ**
ಡಿಜಿಎಂ ಅಪರೇಶನ್ಸ್, ಸೆಲ್ಕೋ

ಸೆಲ್ಕೋ ಸಂಸ್ಥೆಯು ಕಳೆದ ಐದಾರು ವರ್ಷಗಳಿಂದ ಸೌರಶಕ್ತಿ  ಆಧಾರಿತವಾಗಿ ಉದ್ಯ ಮಿಗಳಾಗಬೇಕಂಬ ಹಂಬಲವಿರುವ ಮಹಿಳೆಯರನ್ನು ಪ್ರೋತ್ಸಾಹಿಸಲು ಅನೇಕ ಕಾರ್ಯಗಳನ್ನು  ಮಾಡುತ್ತಿದೆ. ಇದರ ಭಾಗವಾಗಿ ಈ ಸಾಲಿನ ಮಹಿಳಾ ದಿನಾಚರಣೆಯನ್ನು  ನಮ್ಮ ಸಹವರ್ತಿ ಸಂಸ್ಥೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಹಭಾಗಿತ್ವ ದೊಂದಿಗೆ ಧರ್ಮಸ್ಥಳದಲ್ಲಿ **'ಸಮೃದ್ಧಿ ಸಂತೃಪ್ತಿ' – ಎಂಪವರ್ ಹರ್** ಎಂಬ ಶೀರ್ಷಿಕೆಯಡಿಯಲ್ಲಿ  ಆಯೋಜಿಸಲಾಗಿತ್ತು. ಅನೇಕ ಮಹಿಳೆಯರು ಕರ್ನಾಟಕದಲ್ಲಿ ಮತ್ತು ಹೊರರಾಜ್ಯಗಳಲ್ಲಿ ಸೌರ ಉದ್ಯಮಗಳನ್ನು ನಡೆಸುತ್ತಿದ್ದಾರೆ. ಇಂತಹ ಮಹಿಳೆಯರ ಪ್ರತಿನಿಧಿಗಳಾಗಿ ಬೇರೆ ಬೇರೆ ಜಿಲ್ಲೆಗಳಿಂದ ಮಹಿಳಾ ಉದ್ಯಮಿಗಳು ನಮ್ಮ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಲದೆ ಭವಿಷ್ಯದಲ್ಲಿ  ಸೌರ ಉದ್ಯಮಿಗಳಾಗಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ ಆರುನೂರಕ್ಕೂ  ಹೆಚ್ಚು  ಮಹಿಳೆಯರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ  ಭಾಗವಹಿಸಿದ ಕೆಲವರು ಪಾರಂಪರಿಕವಾಗಿ ಮಾಡುತ್ತಿದ್ದ ಕುಲ ಕಸುಬಿಗೆ ಸೌರ ಶಕ್ತಿಯನ್ನು ಅಳವಡಿಸಿ ಆ ಉದ್ಯಮವನ್ನು ಮುಂದುವರಿಸಿ  ಹೊಸ ಸ್ಪರ್ಶವನ್ನು  ನೀಡಿದವರಾಗಿದ್ದಾರೆ. ಇನ್ನೂ  ಕೆಲವರು ಕಾಲಕ್ಕೆ ತಕ್ಕ ಹಾಗೆ ನವ ಉದ್ಯಮವನ್ನು ಆರಂಭಿಸಿದ್ದಾರೆ.  ಇವರಲ್ಲಿ ಅನೇಕರು ಹುಟ್ಟು ಉದ್ಯಮಿಗಳಲ್ಲ, ತಮ್ಮನ್ನು ತಾವು ಸಮಾಜಕ್ಕೆ ಪರಿಚಯಿಸಲು ಮತ್ತು ಹೊಸ ಪ್ರಯೋಗಗಳನ್ನು ಮಾಡಲು ಹಿಂಜರಿಕೆಯುಳ್ಳವರು. ಸಣ್ಣ ಮಟ್ಟದ ಪ್ರೋತ್ಸಾಹ, ಸಮಯಕ್ಕೆ ಸರಿಯಾಗಿ ಸಮಸ್ಯೆಗಳಿಗೆ ಸ್ಪಂದನೆ, ಹಣಕಾಸು ವ್ಯವಸ್ಥೆ, ಅವಕಾಶಗಳನ್ನು ನೀಡಿ ಅದಕ್ಕೆ ತಕ್ಕ ಪರಿಹಾರ ಮತ್ತು ತರಬೇತಿ ಮತ್ತು ಆ ಉತ್ಪನ್ನಕ್ಕೆ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವುದು ಇತ್ಯಾದಿಗಳು ಅವರಿಗೆ ಆವಶ್ಯಕವಾಗಿದೆ. ಈ ಸಹಕಾರಗಳು ಅವರಿಗೆ ಕ್ಲಪ್ತಸಮಯದಲ್ಲಿ ಕಲ್ಪಿಸಿದರೆ ಸಾಕಷ್ಟು ಮಹಿಳೆಯರು ಇತರರ ಜೊತೆಗೂಡಿ ಒಳ್ಳೆಯ ಉದ್ಯಮಿಗಳಾಗಲು ಸನ್ನದ್ಧರಾಗಿದ್ದಾರೆ.

ಇದರಲ್ಲಿ ಸೆಲ್ಕೋ ರೀತಿಯ ಸಂಸ್ಥೆಗಳು ಇಂತಹ ಮಹಿಳೆಯರನ್ನು ಹುಡುಕುವ ಕೆಲಸ ಮಾಡಬೇಕಿದೆ. ಇದರಲ್ಲಿ ಮೂರು ವಿಭಾಗಗಳಿವೆ. **ಮೊದಲನೆಯದಾಗಿ** ಪಾರಂಪರಿಕ ಕಸುಬುದಾರರು. ಇವರನ್ನು ಸುಲಭವಾಗಿ ಹುಡುಕಬಹುದು. ಉದಾಹರಣೆಗೆ, ಕುಂಬಾರರು, ಚಮ್ಮಾ ರರು, ಬಡಗಿಗಳು, ಕಮ್ಮಾರರು. ಅವರಿಗೆ ಮಾರುಕಟ್ಟೆ ಸೌಲಭ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳು ಇಲ್ಲ, ಇವರಿಗೆ ಆವಶ್ಯಕವಾಗಿರುವುದು ತಂತ್ರಜ್ಞಾನ ಮತ್ತು ಅದರ ಮೂಲಕ ಅವರ ಕೆಲಸವನ್ನು ಇನ್ನಷ್ಟು  ಅನುಕೂಲಕರವಾಗಿಸುವುದು.

**ಇನ್ನು ಎರಡನೆಯ ವಿಭಾಗ...**ಸಣ್ಣ ಮಟ್ಟದಲ್ಲಿ ಆದಾಯಗಳಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು. ಈ ಚಟುವಟಿಕೆಗಳಿಗೆ ಸಮಯ ಕೂಡ ಹೆಚ್ಚು  ವಿನಿಯೋಗವಾಗುತ್ತಿದೆ. ಉದಾಹರಣೆಗೆ ಹೊಲಿಗೆ ಮಾಡುವವರು, ಹಾಲು ಕರೆಯುವವರು, ಅವರಿಗೆ ವಯಸ್ಸು ಕಳೆದ ಹಾಗೆ ಆರೋಗ್ಯ ಸಮಸ್ಯೆಗಳು ಕೂಡ ಹೆಚ್ಚು, ಹಸುವಿನ ಹಾಲು ಕರೆಯಲು ತುಂಬಾ ಸಮಯವನ್ನು ತೆಗೆದುಕೊಳ್ಳಲಾಗುತ್ತದೆ. ಅವರಿಗೆ ಒಂದು ಹಸುವಿನ ಕೆಲಸ ಮಾಡಲು ಸಾಕಷ್ಟು ಸಮಯ ಬೇಕು. ಹೀಗಾಗಿ, ಅವರು ಹೆಚ್ಚು ಹಸುಗಳನ್ನು ತೆಗೆದುಕೊಳ್ಳಲು ಹೋಗುವುದಿಲ್ಲ, ಇದರಿಂದ ಅವರ ಆದಾಯ ಕೂಡ ಕಡಿಮೆಯಾಗುತ್ತದೆ. ಅಲ್ಲದೆ, ಅವರಿಗೆ ಕುಟುಂಬದ ಖರ್ಚಿನ ನಿರ್ವಹಣೆಯು ಕಷ್ಟಕರ.  ಇವರಿಗೆ ಕೆಲಸದ ಬಗ್ಗೆ ಮಾಹಿತಿ ನೀಡಬೇಕಂತಿಲ್ಲ, ಅಲ್ಲದೆ ಮಾರುಕಟ್ಟೆಯ ಬಗ್ಗೆಯೂ ಮಾಹಿತಿ ಇದೆ. ಇವರಿಗೆ ಸೌರ ತಂತ್ರಜ್ಞಾನದ ಮಾಹಿತಿ ನೀಡಿದರೆ ಉಪಯುಕ್ತ.  ಅಲ್ಲದೆ ಆರ್ಥಿಕ ಸೌಲಭ್ಯದ ಮಾಹಿತಿಯೂ ಆವಶ್ಯಕ. ಹಾಗೂ ಇವರು ಮೊದಲು ನಿರ್ವಹಿಸುತ್ತಿದ್ದ ರೀತಿ ಮತ್ತು ಅಳವಡಿಸಿದ ನಂತರ ಆಗುವ ಪ್ರಯೋಜನಗಳ ಬಗ್ಗೆಯೂ ಮನವರಿಕೆ ಮಾಡಬೇಕಾಗಿದೆ.

**ಮೂರನೆಯ ವಿಭಾಗ...** ನವೋದ್ಯಮಿಗಳದ್ದು. ಇವರಿಗೆ ತಾವು ವೈಯಕ್ತಿಕ ಅಥವಾ ಗುಂಪಿನಲ್ಲಿ ಯಾವುದಾದರೂ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು, ಮತ್ತು ತಮ್ಮ ವ್ಯರ್ಥ ಸಮಯವನ್ನು ಸದುಪಯೋಗ ಮಾಡಲು ಇಚ್ಛೆಯಿರುತ್ತದೆ. ಅವರಿಗೆ ತಾವು ಮುಂದೇನು ಮಾಡಬಹುದು ಮತ್ತು ಸುಲಭವಾಗಿ ಹೇಗೆ ಮಾಡಬಹುದು ಎಂಬುದರ ಬಗ್ಗೆ ಮಾಹಿತಿ ಇಲ್ಲ, ಇಂತವರ ಸಂಖ್ಯೆ  ಕೂಡ ಹೆಚ್ಚಿದೆ. ಇವರಿಗೆ ಪರಿಪೂರ್ಣ ರೀತಿಯ ಸಹಕಾರ ಬೇಕಿದೆ. ಅವಕಾಶಗಳು, ತರಬೇತಿ, ಉತ್ಪನ್ನಗಳು ಮತ್ತು ಮಾರುಕಟ್ಟೆ.  ಹೀಗೆ, ಎಲ್ಲದರ ವ್ಯವಸ್ಥೆಯನ್ನು  ಮಾಡಬೇಕಿದೆ. ಇಲ್ಲಿ ಸೆಲ್ಕೋ, ಎಸ್ ಕೆಡಿಆರ್‌ಡಿಪಿ, ರುಡ್‌ಸೆಟ್, ಬ್ಯಾಂಕ್‌ಗಳು  ಸರಕಾರಿ ಸಂಸ್ಥೆಗಳಿಗೆ ಅನೇಕ ಸವಾಲುಗಳಿವೆ. ಇವುಗಳು ಈ ನಿಟ್ಟಿನಲ್ಲಿ  ಕೆಲಸ ಮಾಡಬೇಕಿದೆ. ಇದಕ್ಕಾಗಿ ದಿನಬಳಕೆಯ ತಿಂಡಿಗಳು, ಬಟ್ಟೆಗಳು, ಸ್ಟೇಷನರಿ ವಸ್ತುಗಳು, ಮನೆಯಲ್ಲಿ ಬಳಸುವ ಸಣ್ಣ ಉಪಕರಣಗಳು ಅಥವಾ ವಸ್ತುಗಳು ಇತ್ಯಾದಿಗಳನ್ನು ಸ್ಥಳೀಯವಾಗಿ ಉತ್ಪಾದಿಸಬೇಕಿದೆ. ಇದಕ್ಕಾಗಿ ಬೇಕಾಗುವ ಕಚ್ಚಾವಸ್ತುಗಳನ್ನು ಸಹ ದೊರಕಿಸಿ ಕೊಡಬೇಕಿದೆ. ಈ ಕಾರ್ಯಗಳನ್ನು ಮಾಡಿದರೆ ಮಹಿಳೆಯರು ಉದ್ಯಮಿಗಳಾಗುವುದರಲ್ಲಿ ಸಂದೇಹವಿಲ್ಲ. ಇದನ್ನು ಎಲ್ಲರ ಸಹಯೋಗದೊಂದಿಗೆ ಮಾಡಿದರೆ ಹಲವಾರು ಉದ್ಯೋಗದಾತರನ್ನು ಸೃಷ್ಟಿಸಬಹುದು ಎಂಬುದು ನಮ್ಮ ಆಸೆ.

# ದುಬಾರಿ ದುಬೈ



ಜಗದಗಲ

ಜಗದೀಶ ಪೈ ಎ.

(ಫೆಬ್ರವರಿ ಸಂಚಿಕೆಯಿಂದ ಮುಂದುವರಿದುದು)

ಯುಎಇಯಲ್ಲಿ ವಾಸ್ತವ್ಯದ ಖರ್ಚು ಅತೀ ಹೆಚ್ಚಾಗಿದೆ. ಇಲ್ಲಿ ಪ್ರತ್ಯೇಕ ಮನೆ ಬಾಡಿಗೆ ಪಡೆದುಕೊಂಡು ನೆಲೆಸುವುದು ಕಷ್ಟಸಾಧ್ಯ ಆದುದರಿಂದ ಭಾರತೀಯರು ಅನೇಕರು ಒಟ್ಟಾಗಿ ಒಂದೇ ಮನೆಯಲ್ಲಿ ವಾಸಿಸುತ್ತಾರೆ. ಅನೇಕ ಕುಟುಂಬಗಳೂ ಒಂದೇ ಮನೆಯಲ್ಲಿ(ಫ್ಲಾಟ್) ಇದ್ದು ಸರದಿಯಲ್ಲಿ ಅಡುಗೆ ಮನೆ ಉಪಯೋಗಿಸುವುದು ಸಾಮಾನ್ಯವಾಗಿದೆ!.

### ಪ್ರವಾಸೀ ಆಕರ್ಷಣೆಗಳು

ಬುರ್ಜ್ ಖಲೀಫಾ ಜಗತ್ತಿನ ಅತಿ ಎತ್ತರದ ಕಟ್ಟಡ ಎಂಬ ಹೆಗ್ಗಳಿಕೆ ಪಡೆದುಕೊಂಡಿರುವ ಬುರ್ಜ್ ಖಲೀಫಾ 828 ಮೀ. (2,717 ಫೀಟ್) ಎತ್ತರ, 163 ಮಹಡಿಗಳನ್ನು ಹೊಂದಿದೆ. ಇದು ಐಫೆಲ್ ಟವರ್‌ಗಿಂತ ಮೂರು ಪಟ್ಟು ಎತ್ತರ ಮತ್ತು ಎಂಪಾಯರ್ ಸ್ಟೇಟ್ ಬಿಲ್ಡಿಂಗ್‌ಗಿಂತ ಸುಮಾರು ಎರಡು ಪಟ್ಟು ಎತ್ತರವಾಗಿದೆ. ದುಬೈನಲ್ಲಿರುವ ವಿಶ್ವಪ್ರಸಿದ್ಧ ಈ ಕಟ್ಟಡಕ್ಕೆ ಪ್ರತಿ ವರ್ಷ ಲಕ್ಷಾಂತರ ಪ್ರವಾಸಿಗರು ಭೇಟಿ ನೀಡುತ್ತಾರೆ.

ಬುರ್ಜ್ ಖಲೀಫಾದ 148ನೇ ಮಹಡಿಯಲ್ಲಿದೆ ವಿಶ್ವದ ಅತಿ ಎತ್ತರದ ಹೊರಾಂಗಣ ವೀಕ್ಷಣಾ ಡೆಕ್. 1821 ಅಡಿ ಎತ್ತರದಲ್ಲಿರುವ ವೀಕ್ಷಣಾ ಡೆಕ್‌ನಿಂದ ದುಬೈನ ಅತ್ಯದ್ಭುತ ದೃಶ್ಯವನ್ನು ನೋಡಬಹುದು.



### ಗೋಲ್ಡ್ ಸೂಕ್ ಅಥವಾ ಚಿನ್ನದ ಮಾರುಕಟ್ಟೆ

ಗೋಲ್ಡ್ ಸೂಕ್ ದುಬೈ ಪ್ರವಾಸಿಗರಿಗೆ ಅಚ್ಚು ಮೆಚ್ಚಿನ ಪ್ರದೇಶವಾಗಿದೆ. ಇಲ್ಲಿ ರಸ್ತೆಯ ಎರಡೂ ಬದಿಗಳ ಸಣ್ಣ ಅಂಗಡಿಗಳಲ್ಲೂ ಚಿನ್ನ ವಜ್ರದ ಆಭರಣಗಳನ್ನು ಮುಕ್ತವಾಗಿ ಮಾರುತ್ತಾರೆ. ಇಲ್ಲಿಗೆ ಅನತಿ ದೂರದಲ್ಲಿ ಸಾಂಪ್ರದಾಯಿಕ ದೋಣಿ ಅಬ್ರಾ ಮೂಲಕ ಬುರ್ ದುಬೈನಿಂದ ಡೇರಾ ಕಡೆಗೆ ಪ್ರವಾಸಿಗರು ಸಮುದ್ರದ ಅಳಿವೆಯ ಮೂಲಕ ಸಾಗಬಹುದು. ಹಿಂದಿನ ಕಾಲದ ದೋಣಿಯಲ್ಲಿ ಸಾಗುವ ಇದೊಂದು ಅಪೂರ್ವ ಅನುಭವ.

### ದುಬೈ ಮಿರಾಕಲ್ ಗಾರ್ಡನ್

ದುಬೈ ಮಿರಾಕಲ್ ಗಾರ್ಡನ್ ಹೆಸರಿನ ಉದ್ಯಾನವನ್ನು 2013 ರಲ್ಲಿ ಪ್ರಾರಂಭಿಸಲಾಯಿತು. ಇದು 72,000 ಚದರ ಮೀಟರ್ (780,000 ಚದರ ಅಡಿ) ಗಿಂತ ಹೆಚ್ಚು ಆಕ್ರಮಿಸಿಕೊಂಡಿದೆ, ಇದು ವಿಶ್ವದ ಅತಿದೊಡ್ಡ ನೈಸರ್ಗಿಕ ಹೂವಿನ ಉದ್ಯಾನವನವಾಗಿದೆ, ಲಕ್ಷಾಂತರ ಹೂವುಗಳು ಮತ್ತು ನಂಬಲಸಲಾಧ್ಯವಾದ ಸಸ್ಯ ಸಂಪತ್ತನ್ನು ಹೊಂದಿರುವ ಈ ಉದ್ಯಾನ ಆಧುನಿಕ ವಿಶ್ವದ ಅಚ್ಚರಿ ಎಂದೇ ಹೇಳಬಹುದು.

### ಬ್ಯಾಪ್ಸ್ ಹಿಂದೂ ಮಂದಿರ ಅಬುಧಾಬಿ

ಅಬುಧಾಬಿ ಹಿಂದೂ ದೇವಸ್ಥಾನ ಅಬುದಾಭಿಯಲ್ಲಿ ಇದೇ ವರ್ಷ ಸ್ಥಾಪಿಸಿದ ಸ್ವಾಮೀ ನಾರಾಯಣ ಮಂದಿರ ಭಾರತೀಯ ಪ್ರವಾಸಿಗರಿಗೆ ಹೊಸ ಆಕರ್ಷಣೆ ಮತ್ತು ಆರಾಧನೆಯ ಕೇಂದ್ರವಾಗಿದೆ. ಇಲ್ಲಿಗೆ ನಾನು ಭೇಟಿ ಇತ್ತು ದೇವಳದ ಪ್ರಮುಖರೊಂದಿಗೆ ಮಾತುಕತೆ ನಡೆಸಿದ್ದು ನನ್ನ ಮನಸ್ಸಿನಲ್ಲಿ ಅಚ್ಚಳಿಯದ ಅನುಭವ.

ಈ ರೀತಿ ದುಬೈ ಅಬುದಾಭಿ ಭೇಟಿ ನೀಡಿದ ನನಗೆ ಪ್ರವಾಸದ ಜೊತೆಗೆ ಇಲ್ಲಿ ದುಡಿಯುತ್ತಿರುವ ಭಾರತೀಯರ ಸಂತೋಷ ಆಸೆ, ಆಕಾಂಕ್ಷೆ, ನಿರಾಶೆ ಏಕಾಂಗಿತನ ಇವುಗಳನ್ನೆಲ್ಲ ಸಮೀಪದಿಂದ ನೋಡುವ ಒಂದು ಅವಕಾಶ ಕಲ್ಪಿಸಿತು. ನಮ್ಮ ದೇಶದಲ್ಲಿ ಲಭ್ಯವಿರುವ ಪ್ರಾಕೃತಿಕ ಸಂಪತ್ತನ್ನು ಸರಿಯಾಗಿ ಬಳಸಿಕೊಂಡರೆ, ಹಾಗೂ ನಮ್ಮ ದೇಶ ಎಂಬ ಅಭಿಮಾನ ಶಿಸ್ತನ್ನು ಇನ್ನಷ್ಟು ಬೆಳೆಸಿಕೊಂಡಲ್ಲಿ ನಮ್ಮ ಜನರಿಗೆ ಹುಟ್ಟೂರು ಬಿಟ್ಟು ಈ ಬಿಸಿಲು ನಾಡಿಗೆ ಬಂದು ದುಡಿಯುವ ಪ್ರಮೇಯ ಬರಲಾರದು ಎಂದು ನನ್ನ ಅನಿಸಿಕೆ. ಆದರೂ ನಮ್ಮ ಇಲ್ಲಿ ದುಡಿಯಲು ಬಂದ ಜನರ ಸಾಹಸ ಪ್ರವೃತ್ತಿ ಮತ್ತು ದುಡಿಯುವ ಛಲದಿಂದಾಗಿ ನಮ್ಮ ದೇಶದ ಲಕ್ಷಾಂತರ ಕುಟುಂಬಗಳು ಸುಸ್ಥಿರ ಜೀವನ ನಡೆಸುತ್ತಿವೆ ಎಂಬುದು ಮರೆಯಲಾಗದ ಸಂಗತಿ, ಅಲ್ಲವೆ?

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಡೆದ 23ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಸೆಲ್ಕೋ ಸಂಸ್ಥಾಪಕರು ಹಾಗೂ ಸೆಲ್ಕೋ ಫೌಂಡೇಷನ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎಚ್ ಹರೀಶ್ ಹಂದೆ ಅವರು ಉಪನ್ಯಾಸ ನೀಡಿದರು. ಘಟಿಕೋತ್ಸವ ಕಾರ್ಯಕ್ರಮದಲ್ಲಿ ಕರ್ನಾಟಕದ ರಾಜ್ಯಪಾಲರಾದ ಥಾವರ್ ಚೆಂದ್ ಗೆಹ್ಲೋಟ್ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಕುಲಪತಿ ಡಾ. ವಿದ್ಯಾಶಂಕರ್ ಮುಂತಾದವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ, ಸೆಲ್ಕೋ ಇಂಡಿಯಾ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೋಹನ ಭಾಸ್ಕರ ಹೆಗಡೆ ಮತ್ತು ಉಪ ಮಹಾಪ್ರಬಂಧಕ ಪ್ರಸನ್ನ ಹೆಗಡೆ, ಕ್ಷೇತ್ರ ವ್ಯವಸ್ಥಾಪಕ ವಿನಾಯಕ ಹೆಗಡೆ ಅವರು ಉಪಸ್ಥಿತರಿದ್ದರು.





ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಬೆಳ್ಳಾರೆ ಗ್ರಾಮದಲ್ಲಿ ಸೆಲ್ಕೋ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಹಾಗೂ ಊರ ದಾನಿಗಳ ಸಹಕಾರದೊಂದಿಗೆ ಅನುಷ್ಠಾನ ಮಾಡಿದ ಸುಳ್ಯ ತಾಲ್ಲೂಕಿನ ಮೊದಲ ಸೌರಶಕ್ತಿಚಾಲಿತ ಸ್ಮಾರ್ಟ್ ಅಂಗನವಾಡಿ ವ್ಯವಸ್ಥೆಯನ್ನು ದ.ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ನಿರ್ದೇಶಕರಾದ ಎಸ್. ಎನ್. ಮನ್ಮಥ ಅವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ, ಸುಳ್ಯದ ಶಿಶು ಅಭಿವೃದ್ಧಿ ಅಧಿಕಾರಿ ಯೋಜನಾಧಿಕಾರಿ ಶೈಲಜಾ, ಬೆಳ್ಳಾರೆ ಗ್ರಾಮ ಪಂಚಾಯತ್ ಅಧ್ಯಕ್ಷ ನಮಿತಾ ರೈ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪ್ರವೀಣ್ ಕುಮಾರ್ ಸಿ. ವಿ. ಹಾಗೂ ಸೆಲ್ಕೋದ ಏರಿಯ ಮ್ಯಾನೇಜರ್ ಪ್ರಸಾದ್ ಬಿ. ಅವರು ಉಪಸ್ಥಿತರಿದ್ದರು.





ಬಾಗಲಕೋಟಾದ ಬಸವೇಶ್ವರ ವಿದ್ಯಾವರ್ಧಕ ಸಂಘದ (ಬಿವಿವಿಎಸ್) ಕ್ಯಾಂಪಸ್‌ನಲ್ಲಿರುವ ಸೆಲ್ಕೋದ ಎಸ್‌ಟಿಐಟಿಸಿ ತರಬೇತಿ ಕೇಂದ್ರದ ಕುರಿತು ಬಿವಿವಿಎಸ್ ಸಂಸ್ಥೆಯೊಟ್ಟಿಗೆ ಒಪ್ಪಂದ ಮತ್ತು ಕರಾರು ಪತ್ರಕ್ಕೆ ಸೆಲ್ಕೋ ಸಂಸ್ಥೆಯ ಡಿಜಿಎಮ್ ಪ್ರಸನ್ನ ಹೆಗಡೆ, ಬಿವಿವಿಎಸ್ ಪಾಲಿಟೆಕ್ನಿಕ್ ಕಾಲೇಜ್ ಪ್ರಾಂಶುಪಾಲ ಜಿ. ಬಿ. ದಾನಶೆಟ್ಟಿ ಸಹಿ ಮಾಡಿ ಪರಸ್ಪರ ಹಸ್ತಾಂತರಿಸಿದರು. ಎಸ್‌ಟಿಐಟಿಸಿ ತರಬೇತಿ ಕೇಂದ್ರದ ಅಭಿವೃದ್ಧಿ ಮತ್ತು ಕಾರ್ಯಪರತೆಯ ಕುರಿತು ಸಭೆ ನಡೆಸಲಾಯಿತು. ಸಭೆಯಲ್ಲಿ ಸೆಲ್ಕೋ ತರಬೇತಿ ಕೇಂದ್ರ ಮತ್ತು ಬಿವಿವಿಎಸ್ ಸಿಬಂದಿ ಉಪಸ್ಥಿತರಿದ್ದರು.



Selco India's
Foundation
Day
March
30
Empowering Communities, Igniting Change
Celebrating SELCO's journey
SELCO®
www.selco-india.com
Helpline
1800-419-0780